ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಜೂನ್ 24, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 41 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
☎ 08192 254736 91642 99999



Hyundai Car Carnival - 22nd to 26th June, 2023
ಈ ಮಾನ್ಸೂನ್‌ನಲ್ಲಿ ಅತ್ಯಾಕರ್ಷಕ ಕೊಡುಗೆಗಳೊಂದಿಗೆ ಖುಷಿಯಿಂದ ಖರೀದಿಸಿ
ನಿಮ್ಮ ನೆಚ್ಚಿನ ಹೊಚ್ಚಹೊಸ Hyundai Grand i10 NIOS, i20




i20 ₹20 000* ವರೆಗೆ ಲಾಭಗಳು | Grand i10 NIOS ₹38 000* ವರೆಗೆ ಲಾಭಗಳು | ₹15 000* ಹೆಚ್ಚುವರಿ ಕಾರ್ನೀವಲ್ ಪ್ರಯೋಜನಗಳು

*Terms and conditions apply. Offer valid for limited stocks only.

K J HYUNDAI | Davangere: 7022001205 / 7022042241 / 7406555077• Channagiri: 7022425985 / 9148004999
Chitradurga: 9980759983, 7022898487, 7022426017

HYUNDAI


## ಬಿತ್ತನೆ ಬೀಜ, ರಸಗೊಬ್ಬರದ ಆತಂಕ ಬೇಡ : ಎಸ್ಸೆಸ್ಸೆಂ

ದಾವಣಗೆರೆ, ಜೂ.23- ಪ್ರಕೃತಿಯ ವೈಪರೀತ್ಯದಿಂದಾಗಿ, ಮೇ ಕೊನೆಯ ವಾರದಲ್ಲಿ ಆರಂಭವಾಗಬೇಕಿದ್ದ ಮುಂಗಾರು ಜೂನ್ ಕೊನೆಯ ವಾರದಲ್ಲಿ ಆರಂಭವಾಗಿದ್ದು, ಉತ್ತಮ ಮಳೆ ಬರುವ ಮುನ್ಸೂಚನೆಯನ್ನು



ಹವಾಮಾನ ಇಲಾಖೆ ನೀಡಿರುವುದರಿಂದ ರೈತರು ಬಿತ್ತನೆ ಕಾರ್ಯವನ್ನು ಮುಂಬರುವ ದಿನಗಳಲ್ಲಿ ಚುರುಕುಗೊಳಿಸಬಹುದು ಎಂದು ತೋಟಗಾರಿಕೆ ಹಾಗೂ ಗಣಿ ಮತ್ತು ಭೂ ವಿಜ್ಞಾನ ಸಚಿವ ಎಸ್. ಎಸ್.ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಕೃಷಿ ಇಲಾಖೆ ಅಭಿಪ್ರಾಯದಂತೆ ಜುಲೈವರೆಗೂ ಬಿತ್ತನೆ ಕಾರ್ಯ ಆರಂಭಿಸಬಹುದಾಗಿದ್ದು, ರೈತರಿಗೆ ತೊಂದರೆ ಆಗದಂತೆ ಅಗತ್ಯ ಇರುವಷ್ಟು ಬಿತ್ತನೆ ಬೀಜ ಮತ್ತು ರಸಗೊಬ್ಬರ ದಾಸ್ತಾನು ಇದ್ದು, ರೈತರ ಬೇಡಿಕೆಗೆ ಅನುಗುಣವಾಗಿ ವಿತರಣೆಗೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಈಗಾಗಲೇ ಕೆಲವು ಭಾಗಗಳಲ್ಲಿ ಕೆಲವು ರೈತರು ಬಿತ್ತನೆ ಮಾಡಿದ್ದು, ಇನ್ನು ಬಿತ್ತನೆ ಕಾರ್ಯ ನಡೆಯಬೇಕಿದ್ದು, ಬಿತ್ತನೆ ಬೀಜ, ರಸಗೊಬ್ಬರಗಳ ದಾಸ್ತಾನು ಇರುವುದರಿಂದ ರೈತರು ಆತಂಕಪಡುವ ಅಗತ್ಯವಿಲ್ಲ ಎಂದು ಅವರು ತಿಳಿಸಿದರು. ಪ್ರಸಕ್ತ ವರ್ಷದಲ್ಲಿ ಎರಡೂವರೆ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮುಂಗಾರು ಹಂಗಾಮಿನ ಕೃಷಿ ಬಿತ್ತನೆ ಗುರಿ (2ನೇ ಪುಟಕ್ಕೆ)

## ಪಂಚಮಸಾಲಿ ಹಿಂದುಳಿದ ಪಟ್ಟಿಗೆ ಸೇರ್ಪಡೆ ತಜ್ಞರ ಸಭೆ ಕರೆದು ತೀರ್ಮಾನ : ಸಿಎಂ

ಬೆಂಗಳೂರು, ಜೂ. 23 - ಪಂಚಮಸಾಲಿ ಸಮುದಾಯವನ್ನು ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆ ಮಾಡಲು ಶಿಫಾರಸ್ಸು ಮಾಡುವ ಬಗ್ಗೆ ಬಜೆಟ್ ಅಧಿವೇಶನದ ನಂತರ ಕಾನೂನು ಹಾಗೂ ಸಂವಿಧಾನ ತಜ್ಞರ ಸಭೆ ಕರೆದು ಸಂವಿಧಾ ನಾತ್ಮಕ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಪಂಚಮಸಾಲಿ ಸಮುದಾಯವನ್ನು ರಾಜ್ಯ 2 ಎ ಪಟ್ಟಿಗೆ ಹಾಗೂ ಕೇಂದ್ರ ಸರ್ಕಾರದ ಒಬಿಸಿ ಮೀಸಲಾತಿಗೆ ಸೇರಿಸಲು ಕೂಡಲ ಸಂಗಮ ಪೀಠದ ಜಗದ್ಗುರು ಶ್ರೀ ಜಯ ಮೃತ್ಯುಂಜಯ ಸ್ವಾಮೀಜಿ ಅವರ ನೇತೃತ್ವದಲ್ಲಿ ಪಂಚಮಸಾಲಿ ಶಾಸಕರ ನಿಯೋಗವು ಅವರನ್ನು ಭೇಟಿ ಮಾಡಿ ಮನವಿ ಮಾಡಿತು. ಶೈಕ್ಷಣಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ಪಂಚಮಸಾಲಿ ಸಮುದಾಯವನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಿದಲ್ಲಿ ಅವರೂ ಮುಖ್ಯ (2ನೇ ಪುಟಕ್ಕೆ)

## ಸೌರಶಕ್ತಿ ಹೆಚ್ಚಾಗಿರುವಾಗ ವಿದ್ಯುತ್ ಬಳಸಿದರೆ ಶೇ.20ರವರೆಗೆ ಉಳಿತಾಯ

**ಸಣ್ಣ ಘಟಕಗಳು, ಗ್ರಾಹಕರಿಗೆ ಸಮಯಾಧಾರಿತ ವಿದ್ಯುತ್ ದರ**

ನವದೆಹಲಿ, ಜೂ. 23 – ಮನೆ ಬಳಕೆ ವಿದ್ಯುತ್‌ಗೆ ಸಮಯ ಆಧರಿತವಾಗಿ ದರ ನಿಗದಿ ಪಡಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಇದರಿಂದಾಗಿ ಸೂರ್ಯನ ಬೆಳಕು ಹೆಚ್ಚಾಗಿರುವ ಸಮಯದಲ್ಲಿ ವಿದ್ಯುತ್ ಬಳಸುವವರಿಗೆ ಶೇ.20ರವರೆಗೆ ಉಳಿತಾಯವಾಗಲಿದೆ.

ಪ್ರಸಕ್ತ ಇಡೀ ದಿನದ ಬಳಕೆಗೆ ಒಂದೇ ರೀತಿಯ ದರ ಇದೆ. ಸಮಯ ಆಧಾರಿತ ದರ ನಿಗದಿ ಪಡಿಸುವುದರಿಂದ, ಗ್ರಾಹಕರು ಸೌರವಿದ್ಯುತ್ ಬಳಕೆ ಹೆಚ್ಚಾಗಿರುವ ಸಮಯದಲ್ಲಿ ಹಣ ಉಳಿಸಲು ಸಾಧ್ಯವಾಗಲಿದೆ. ವಾಷಿಂಗ್ ಮಷಿನ್, ಅಡುಗೆ ಇತ್ಯಾದಿ ಕೆಲಸಗಳನ್ನು ಸೌರ ವಿದ್ಯುತ್ ಲಭ್ಯವಿರುವ ಸಮಯದಲ್ಲಿ ಕೈಗೊಂಡಾಗ ಹಣ (3ನೇ ಪುಟಕ್ಕೆ)


ಶ್ರೀ ಕುರುವತ್ತಿ ಬಸವೇಶ್ವರ ಸೇವಾ ಟ್ರಸ್ಟ್ (ರಿ.)
ಓಂ ಟೈಲರ್ ರೋಡ್, ನಿಟುವಳ್ಳಿ, ದಾವಣಗೆರೆ-2.
ವೃದ್ಧಾಶ್ರಮ
ನಮ್ಮಲ್ಲಿ ವಯಸ್ಸಾದವರನ್ನು ನೋಡಿಕೊಳ್ಳುತ್ತೇವೆ.
ಆಸಕ್ತರು ಸಂಪರ್ಕಿಸಿ :
ಫೋ. : 96323 73733, 99861 58594
99021 45186, 99007 09277



ಮಲಬಾರ್ ಗೋಲ್ಡ್ & ಡೈಮಂಡ್ಸ್



ಈ ಆಷಾಢ, ಚಿನ್ನದಂತೆ ಬೆಳಗಿ
ಈ ಆಷಾಢ, ಮಲಬಾರ್ ಗೋಲ್ಡ್ & ಡೈಮಂಡ್ಸ್ ನಿಮ್ಮ ಕಾಂತಿಗೆ ಹೊಂದಿಕೆಯಾಗುವ ಸುಂದರವಾದ ಆಭರಣಗಳನ್ನು ನಿಮಗೆ ತರುತ್ತದೆ. ಮಲಬಾರ್ ಗೋಲ್ಡ್ & ಡೈಮಂಡ್ಸ್‌ನ ಶುದ್ಧತೆ ಮತ್ತು ಅತ್ಯುತ್ತಮವಾದ ಚಿನ್ನದಿಂದ ನೀವು ಮತ್ತು ನಿಮ್ಮ ಕ್ಷಣಗಳು ಎಂದಿಗಿಂತಲೂ ಪ್ರಕಾಶಮಾನವಾಗಿ ಹೊಳೆಯಲಿ.
MALABAR FAIR PRICE PROMISE For Everyone. Every day. Everywhere.
ತಯಾರಿಕಾ ಶುಲ್ಕ 4.9% ರಿಂದ ಆರಂಭ

ಆಷಾಢ ಶುಭ ಲಾಭ




Conditions Apply*
ಹಳೆಯ 22 KT ಚಿನ್ನ ವಿನಿಮಯದ ಮೇಲೆ 100% ಮೌಲ್ಯವನ್ನು ಪಡೆಯಿರಿ.
ಯಾವುದೇ ಆಭರಣಕಾರರಿಂದ ಖರೀದಿಸಿದ ನಿಮ್ಮ ಹಳೆಯ (ಹಾಲ್‌ಮಾರ್ಕ್ ಅಥವಾ ಹಾಲ್‌ಮಾರ್ಕ್ ಇಲ್ಲದ) ಚಿನ್ನವನ್ನು ತನ್ನಿ ಮತ್ತು ಅದನ್ನು ಮಲಬಾರ್ HUID ಹಾಲ್‌ಮಾರ್ಕ್ ಉತ್ಪನ್ನಗಳೊಂದಿಗೆ ವಿನಿಮಯ ಮಾಡಿಕೊಳ್ಳಿ



ಪ್ರತೀ ಖರೀದಿಯೊಂದಿಗೆ ಉಚಿತ ಬೆಳ್ಳಿಯ ನಾಣ್ಯ
ಈ ಕೊಡುಗೆ ಜುಲೈ 19 ರವರೆಗೆ

ದಾವಣಗೆರೆ, ಮಂಡಿಪೇಟೆ.
ದೂ: 08192– 231916, 7994435487
BUY ONLINE AT: malabargoldanddiamonds.com
INDIA | UK | USA | SINGAPORE | MALAYSIA | UAE | QATAR | KSA | OMAN | KUWAIT | BAHRAIN


## ಜಗದೀಶ ಶೆಟ್ಟರ್ ಸೇರಿ ಪರಿಷತ್‌ಗೆ ಮೂವರು ಅವಿರೋಧ ಆಯ್ಕೆ



ಬೆಂಗಳೂರು, ಜೂ. 23 - ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಸಚಿವ ಬೋಸರಾಜು ಹಾಗೂ ತಿಪ್ಪಣ್ಣ ಕಮಕನೂರು ಅವರು ವಿಧಾನ ಪರಿಷತ್ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವಿಧಾನ ಪರಿಷತ್ ಉಪ ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದ ಕಾಂಗ್ರೆಸ್ ಅಭ್ಯರ್ಥಿಗಳಾದ ಜಗದೀಶ್ ಶೆಟ್ಟರ್, ತಿಪ್ಪಣ್ಣ ಕಮಕನೂರು ಹಾಗೂ ಸಚಿವ ಬೋಸರಾಜು ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ವಿಶಾಲಾಕ್ಷಿ ಅಧಿಕೃತವಾಗಿ ಘೋಷಿಸಿದ್ದಾರೆ.

## ಭತ್ತದ ಬಿತ್ತನೆಯಲ್ಲಿ ಶೇ.35ರ ಇಳಿಕೆ

ನವದೆಹಲಿ, ಜೂ. 23 – ಮುಂಗಾರು ವಿಳಂಬವಾಗಿರುವ ಕಾರಣ ಪ್ರಸಕ್ತ ಹಂಗಾಮಿನಲ್ಲಿ ಭತ್ತದ ಬಿತ್ತನೆ ಶೇ.35ರಷ್ಟು ಕಡಿಮೆಯಾಗಿದ್ದು, 10.77 ಲಕ್ಷ ಹೆಕ್ಟೇರ್‌ಗೆ ಸೀಮಿತವಾಗಿದೆ.

ಕಳೆದ ವರ್ಷ ಇದೇ ಅವಧಿಯಲ್ಲಿ 16.46 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬಿತ್ತನೆಯಾಗಿತ್ತು ಎಂದು ಕೃಷಿ ಸಚಿವಾಲಯ ತಿಳಿಸಿದೆ.

ಇದುವರೆಗೂ 6.54 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೇಳೆಗಳ ಬಿತ್ತನೆಯಾಗಿದೆ. ಇದು ಕಳೆದ ವರ್ಷದ 6.30 ಲಕ್ಷ ಹೆಕ್ಟೇರ್ ಬಿತ್ತನೆಗಿಂತ ಹೆಚ್ಚಾಗಿದೆ.

ಖಾದ್ಯ ತೈಲ ಬೀಜಗಳ ಬಿತ್ತನೆ ಪ್ರದೇಶ ಕಳೆದ (2ನೇ ಪುಟಕ್ಕೆ)

## ಶ್ರೀಮತಿ ಮೇಕಾ ಜಾನಕಿ ಲಕ್ಷ್ಮೀ ನಿಧನ



ದಾವಣಗೆರೆ ತಾಲ್ಲೂಕು ಅರಸಾಪುರ ಗ್ರಾಮದ (ಕಡ್ಲೇಬಾಳು)
ವಾಸಿ ದಿವಂಗತ ಮೇಕಾ ಸೂರ್ಯನಾರಾಯಣರವರ ಧರ್ಮಪತ್ನಿ
**ಶ್ರೀಮತಿ ಮೇಕಾ ಜಾನಕಿ ಲಕ್ಷ್ಮೀ** ಅವರು
ದಿನಾಂಕ 23-6-2023ರ ಶುಕ್ರವಾರ ಬೆಳಿಗ್ಗೆ 11-30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
ಅಂತ್ಯಕ್ರಿಯೆಯು ದಿನಾಂಕ 23-06-2023ರ ಶುಕ್ರವಾರದಂದೇ ಸಂಜೆ ಹರಿಹರದ ವೈಕುಂಠಧಾಮದಲ್ಲಿ (ದಾಲ್ಮಿಯ ಘಾಟ್) ನೆರವೇರಿತು.
ಇಂತಿ ದು:ಖತಪ್ತ ಕುಟುಂಬವರ್ಗ
* ಮೇಕಾ ಸತ್ಯನಾರಾಯಣ * ಮೇಕಾ ಮುರುಳಿಕೃಷ್ಣ
* ಶ್ರೀಮತಿ ವಂಟಿಪಲ್ಲಿ ವೆಂಕಟಲಕ್ಷ್ಮೀ
ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.
ಮೊ : +91 99861 40609





NEET LONGTERM COACHING-2024
2nd Batch Admissions are in Progress
Limited Hostel facility Available
Reserve your seat
Expected number of free Medical seats is more than 340 in NEET-2023 from single campus
Scan for Details
NEET - 2023
15 Students Above 650 Marks
59 Students Above 600 Marks
NEET MARKS 680/720 SAGAR H. P.
NEET MARKS 680/720 SRINIVAS B. M.
SIR M V GROUP OF INSTITUTIONS
DAVANGERE | SHIMOGA Ph : 9148684483 | BALLARI Ph : 8197764018
Davangere Ph. : 08192-261200, 9243312223, 8722141400

# ಗ್ಯಾರಂಟಿ ಪಡೆಯಲು ಸುಲಭ ಮಾರ್ಗ

## ಪಂಚಾಯ್ತಿಗಳಲ್ಲಿ ಶಾಸಕರ ಸಹಾಯ ಕೇಂದ್ರ ಸ್ಥಾಪನೆ

ರಾಣೇಬೆನ್ನೂರು, ಜೂ.23- ಚುನಾವಣೆ ಪೂರ್ವದಲ್ಲಿ ಹೇಳಿದ ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳನ್ನು ತಾಲ್ಲೂಕಿನ ಜನತೆ ಪಡೆದುಕೊಳ್ಳಲು ಅನುಕೂಲವಾಗ ಲೆಂದು ಪ್ರತಿ ಗ್ರಾ. ಪಂ ಗಳಲ್ಲಿ ಶಾಸಕರ ಸಹಾಯ ಕೇಂದ್ರ ತೆರೆಯಲು ತೀರ್ಮಾನಿಸಿದ್ದು, ಇಂದು ಕರೂರು ಗ್ರಾಮದಲ್ಲಿ ಚಾಲನೆ ನೀಡಲಾಯಿತು.



**ರಾಣೇಬೆನ್ನೂರು**

ಶಾಸಕರ ಆಪ್ತರೇ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇಂದಿನಿಂದ ಗೃಹ ಜ್ಯೋತಿ ರಿಜಿಸ್ಟರ್ ಮಾಡಲಾಗುವುದು. ಕಾಂಗ್ರೆಸ್ ನೀಡಿದ ಎಲ್ಲ ಗ್ಯಾರಂಟಿಗಳು ಜನರ ಬದುಕಿಗೆ ಅತ್ಯಂತ ಹತ್ತಿರವಾದವುಗಳು. ಯಾಂತ್ರಿಕ ತೊಂದರೆಗಳನ್ನು ಅರಿತು ಅವುಗಳನ್ನು ಪಡೆಯಲು ಜನರು ಸಮಾಧಾನದಿಂದ ಸಹಕರಿಸಬೇಕು ಎಂದು ಶಾಸಕ ಪ್ರಕಾಶ ಕೋಳಿವಾಡ ಮನವಿ ಮಾಡಿದರು.

ಮಹಿಳೆಯರು ಕೇವಲ ಅಡುಗೆ ಮನೆಗೆ ಹಾಗೂ ಹೊಲ, ಬದುಕಿಗೆ ಸೀಮಿತರಾಗಬಾರದು ಎಂದು ರಾಜ್ಯ ಸಾರಿಗೆಯಲ್ಲಿ ಉಚಿತ ಸಂಚಾರಕ್ಕೆ ಅವಕಾಶ ಕಲ್ಪಿಸಿದ್ದು, ಹೊರ ಜಿಲ್ಲೆಗಳ ಪರಿಸರ, ಸಾಹಿತ್ಯ, ಸಂಸ್ಕೃತಿ ಅರಿತು ತಮ್ಮ ಬದುಕನ್ನು ವಿಸ್ತರಿಸಿಕೊಳ್ಳಬೇಕು. ನಮ್ಮೆಲ್ಲ ಗ್ಯಾರಂಟಿಗಳ ಸದುಪಯೋಗ ಮಾಡಿಕೊಳ್ಳುವಂತೆ ಶಾಸಕರು ಹೇಳಿದರು. ಗ್ರಾ.ಪಂ ಅಧ್ಯಕ್ಷೆ ನೀಲಮ್ಮ ಪೂಜಾರ, ಕಾಂಗ್ರೆಸ್ ಮುಖಂಡ ಎಚ್.ಎಚ್. ಮುಡದ್ಯಾವಣ್ಣನವರ, ಪಿಡಿಓ ಜ್ಯೋತಿ ಕಮ್ಮಾರ, ಉಪಾಧ್ಯಕ್ಷರು, ಸದಸ್ಯರು ಮತ್ತಿತರರಿದ್ದರು. ಶಿಕ್ಷಕ ಕೇಶವ ಬಾರ್ಕಿ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

# ಬಿಜೆಪಿ ವಿರುದ್ಧ ಸಂಘಟಿತ ಹೋರಾಟಕ್ಕೆ ರಣಕಹಳೆ

ಪಾಟ್ನಾ, ಜೂ. 23 – 2024ರ ಲೋಕಸಭಾ ಚುನಾವಣೆಗೆ ರಣಕಹಳೆ ಮೊಳಗಿಸಿರುವ ಪ್ರತಿಪಕ್ಷಗಳು, ಬಿಜೆಪಿಯನ್ನು ಸಂಘಟಿತವಾಗಿ ಎದುರಿಸುವುದಾಗಿ ಹೇಳಿವೆ.

ಪ್ರತಿಪಕ್ಷಗಳು ಸಭೆ ನಡೆಸಿ ಚುನಾವಣಾ ತಂತ್ರಗಾರಿಕೆ ಕುರಿತು ಚರ್ಚಿಸಿವೆ. ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಪ್ರತಿಪಕ್ಷಗಳ ನಾಯಕರು, ಸಮಾನ ಅಜೆಂಡಾದೊಂದಿಗೆ ಚುನಾವಣೆ ಎದುರಿಸಲಾಗುವುದು. ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ರಾಜ್ಯ ಮಟ್ಟದಲ್ಲಿ ತಂತ್ರಗಾರಿಕೆ ರೂಪಿಸಲಾಗುವುದು ಎಂದಿದ್ದಾರೆ.

ಬರುವ ಜುಲೈ 10 ಇಲ್ಲವೇ 12ರಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ಎರಡನೇ ಸಭೆ ನಡೆಯಲಿದೆ. ಅಲ್ಲಿ ಮುಂದಿನ ಕಾರ್ಯಯೋಜನೆ ಕುರಿತು ನಿರ್ಧರಿಸಲಾಗುವುದು.

**2024ರ ಚುನಾವಣೆಗೆ ಜೊತೆಯಾದ ಪ್ರತಿಪಕ್ಷಗಳು**

ಪ್ರತಿಯೊಂದು ರಾಜ್ಯಕ್ಕೂ ಪ್ರತ್ಯೇಕ ಯೋಜನೆಗಳನ್ನು ರೂಪಿಸಬೇಕಿದೆ. ಕೇಂದ್ರದಲ್ಲಿ ಬಿಜೆಪಿಯನ್ನು ಪದಚ್ಯುತಗೊಳಿಸಲು ನಾವು ಜೊತೆಯಾಗಿ ಕಾರ್ಯನಿರ್ವಹಿಸುತ್ತೇವೆ ಎಂದು ಖರ್ಗೆ ತಿಳಿಸಿದ್ದಾರೆ.

ಸಭೆಯಲ್ಲಿ ಹತ್ತಾರು ರಾಜಕೀಯ ಪಕ್ಷಗಳ 32ಕ್ಕೂ ಹೆಚ್ಚು ನಾಯಕರು ಪಾಲ್ಗೊಂಡಿದ್ದರು. ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ನಿವಾಸದಲ್ಲಿ ಮೊದಲ ಸಭೆ ನೆರವೇರಿತು.

ಆದರೆ, ಮೊದಲ ಸಭೆಯಲ್ಲೇ ಒಡಕು ಕಂಡು ಬಂದಿದೆ. ದೆಹಲಿ ಕುರಿತು ಕೇಂದ್ರ ಸರ್ಕಾರ ಹೊರಡಿಸಿರುವ ಸುಗ್ರೀವಾಜ್ಞೆ ವಿರೋಧಿಸುವುದಾಗಿ ಕಾಂಗ್ರೆಸ್ ಬಹಿರಂಗವಾಗಿ ಹೇಳುವವರೆಗೆ ವಿಪಕ್ಷ ಮೈತ್ರಿಕೂಟದ ಭಾಗವಾಗುವುದಿಲ್ಲ ಎಂದು ಆಮ್ ಆದ್ಮಿ ಪಾರ್ಟಿ ಹೇಳಿದೆ.

ಬಿ.ಎಸ್.ಪಿ.ಯ ಮಾಯಾವತಿ, ಬಿ.ಜೆ.ಡಿ.ಯ ನವೀನ್ ಪಾಟ್ನಾಯಕ್, ಬಿ.ಆರ್.ಎಸ್.ನ ಕೆ. ಚಂದ್ರಶೇಖರ ರಾವ್ ಹಾಗೂ ವೈ.ಎಸ್.ಆರ್.ಸಿ.ಪಿ.ಯ. ಜಗನ್ ಮೋಹನ್ ರೆಡ್ಡಿ ಅವರಿಗೆ ಆಹ್ವಾನ ನೀಡಿರಲಿಲ್ಲ. ಆರ್.ಎಲ್.ಡಿ. ನಾಯಕ ಜಯಂತ್ ಚೌಧರಿ ಅವರು ಕೌಟುಂಬಿಕ ಕಾರ್ಯಕ್ರಮದ ಕಾರಣದಿಂದ ಪಾಲ್ಗೊಂಡಿರಲಿಲ್ಲ.

ವಿಪಕ್ಷಗಳ ಸಭೆಯನ್ನು ತಳ್ಳಿ ಹಾಕಿರುವ ಬಿಜೆಪಿ, ಇದೊಂದು ಬಹುಮುಖಿ ಸ್ವಾರ್ಥಿ ಒಕ್ಕೂಟ. ತೋಳಗಳು ಜೊತೆಯಾಗಿ ಬೇಟೆ ಆಡಿರುವಂತಿದೆ ಎಂದು ಹೇಳಿದೆ.

## ಜಿಗಳಿಯಲ್ಲಿ ಸಂಭ್ರಮದ ಅಜ್ಜಿ ಹಬ್ಬ



ಮಲೇಬೆನ್ನೂರು ಜೂ 23 - ಉತ್ತಮ ಮಳೆ -ಬೆಳೆಗಾಗಿ ಪ್ರಾರ್ಥಿಸಿ ಜಿಗಳಿ ಗ್ರಾಮದಲ್ಲಿ ಶುಕ್ರವಾರ ಅಜ್ಜಿ ಹಬ್ಬವನ್ನು ಶ್ರದ್ಧಾ-ಭಕ್ತಿಯಿಂದ ಆಚರಿಸಿದರು.

ಮಹಿಳೆಯರು ಮನೆಯಲ್ಲಿ ಮಣ್ಣಿನ ಕುಡಿಕೆಗೆ ನೀರು ಹಾಕಿ, ಬೇವಿನ ಸೊಪ್ಪು, ವೀಳ್ಯೆದೆಲೆ, ಅರಿಸಿಣ -ಕುಂಕುಮ, ಹಸಿರು ಬಳೆ ಇಟ್ಟು ಹೋಳಿಗೆ ಎಡೆ ಹಾಕಿ ಪೂಜೆ ಸಲ್ಲಿಸಿದ ನಂತರ ಬರಿಗಾಲಿನಿಂದ ನಡೆದುಕೊಂಡು ಬೇವಿನಕಟ್ಟೆಗೆ ತೆರಳಿ ಮೂರು ಸುತ್ತು ಪ್ರದಕ್ಷಣೆ ಹಾಕಿ ಅಜ್ಜಿ ಕುಡಿಕೆಯನ್ನು ಅಲ್ಲಿಟ್ಟು ಪ್ರಾರ್ಥನೆ ಸಲ್ಲಿಸುವುದೇ ಅಜ್ಜಿ ಹಬ್ಬದ ಆಚರಣೆ ಆಗಿದೆ. ಇದರ ಮುಂದುವರೆದ ಭಾಗವಾಗಿ ಮಂಗಳವಾರ ಆಷಾಢ ಹಬ್ಬವನ್ನೂ ಆಚರಿಸಲಾಗುವುದು.

## ಹರಿಹರ : ಇಂದು ಬೀದಿ ವ್ಯಾಪಾರಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮ

ಹರಿಹರ ನಗರಸಭೆಯಿಂದ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಬೀದಿ ಬದಿ ವ್ಯಾಪಾರಿಗಳ ಆತ್ಮನಿರ್ಭರ ನಿಧಿ ಯೋಜನೆಯಡಿ (ಪಿಎಂ ಸ್ವನಿಧಿ) ಬೀದಿ ಬದಿ ವ್ಯಾಪಾರಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಇಂದು ಬೆಳಗ್ಗೆ 11 ಗಂಟೆಗೆ ಗುರುಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್ ಹಾಗೂ ನಗರಸಭಾ ಸದಸ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಪೌರಾಯುಕ್ತ ಐಗೂರು ಬಸವರಾಜ್ ತಿಳಿಸಿದ್ದಾರೆ.

## ಹಿಂದುಳಿದ ಪಟ್ಟಿಗೆ

(1ನೇ ಪುಟದಿಂದ) ವಾಹಿನಿಗೆ ಬರಲು ಅನುಕೂಲ ವಾಗುತ್ತದೆ ಎಂದು ಸ್ವಾಮೀಜಿ ತಿಳಿಸಿದರು. ಹಿಂದಿನ ಸರ್ಕಾರ ಮೀಸಲಾತಿ ವಿಚಾರದಲ್ಲಿ ತರಾತುರಿಯಲ್ಲಿ ನಿರ್ಧಾರ ಕೈಗೊಂಡು ಗೊಂದಲ ಸೃಷ್ಟಿಸಿದೆ. ಮೂಗಿಗೆ ತುಪ್ಪ ಸವರುವ ಬದಲು ಹಣೆಗೆ ತುಪ್ಪ ಸವರಿದೆ ಎಂದ ಮುಖ್ಯಮಂತ್ರಿಗಳು, ಮೀಸಲಾತಿ ವಿಚಾರವಾಗಿ ಆತುರದ ನಿರ್ಧಾರ ಸಲ್ಲದು. ಸಂವಿಧಾನಾತ್ಮಕ ಹಾಗೂ ಕಾನೂನಿನ ಚೌಕಟ್ಟಿನಲ್ಲಿ ತೀರ್ಮಾನ ಮಾಡಬೇಕು. ಹಾಗಾಗಿ ಸಭೆ ಕರೆದು ಕೂಲಂಕುಶವಾಗಿ ಚರ್ಚಿಸಲಾಗುವುದು ಎಂದರು. ಮುಖ್ಯಮಂತ್ರಿಗಳ ಮಾತಿಗೆ ಪ್ರತಿಕ್ರಿಯಿಸಿದ ಶಾಸಕ ವಿನಯ್ ಕುಲಕರ್ಣಿ, ಮುಸ್ಲಿಂ ಸಮುದಾಯದ ಪಾಲಿನ ಮೀಸಲಾತಿಯನ್ನು ಕಿತ್ತು ಕೊಟ್ಟಿದ್ದನ್ನು ನಾವುಗಳು ಅವತ್ತೇ ವಿರೋಧಿಸಿದ್ದೆವು ಎಂದರು.

## ಚಿಟ್ ಫಂಡ್ ಉತ್ಸವಕ್ಕೆ ಜಿಲ್ಲಾ ಪ್ರತಿನಿಧಿಗಳು

ವಿವಿಧ ರಾಜ್ಯಗಳ ಚಿಟ್ ಫಂಡ್ ಸಂಘಗಳ ಪ್ರತಿನಿಧಿಗಳನ್ನು ಒಳಗೊಂಡ ರಾಷ್ಟ್ರಮಟ್ಟದ ಚಿಟ್ ಫಂಡ್ ಉತ್ಸವವು ಇಂದು ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ ಬೆಂಗಳೂರಿನ ಆರ್. ಜೆ. ರಾಯಲ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದೆ. ಈ ಉತ್ಸವದಲ್ಲಿ ಸ್ಥಳೀಯ ಎಲ್ಲಾ ಚೀಟಿ ನಿಧಿ ಕಂಪನಿಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ಚೀಟಿ ನಿಧಿಗಳ ಸಂಘದ ಕಾರ್ಯದರ್ಶಿ ಅಂದನೂರು ರಾಜೇಶ್ ತಿಳಿಸಿದ್ದಾರೆ.

## ಸದೃಢ ಆರೋಗ್ಯಕ್ಕೆ ಯೋಗ ಮುಖ್ಯ



ಕೊಂಡಜ್ಜಿ, ಜೂ. 22- ಯೋಗವು ನಮಗೆ ವ್ಯಾಯಾಮ ಮಾತ್ರವಲ್ಲದೆ ವಿಶ್ವ ಹಾಗೂ ಪ್ರಕೃತಿಯ ಜೊತೆಗೆ ಏಕತೆಯ ಅರ್ಥವನ್ನು ಕಂಡು ಹಿಡಿಯಲು ನೆರವಾಗುತ್ತದೆ ಎಂದು ಯೋಗ ಪಟು ಭರಮಪ್ಪ ಹೇಳಿದರು.

ಕೊಂಡಜ್ಜಿಯ ಪೊಲೀಸ್ ಪಬ್ಲಿಕ್ ವಸತಿ ಶಾಲೆಯಲ್ಲಿ ನಡೆದ 9ನೇ ಅಂತರ ರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಯೋಗದ ಗುರಿಯು ಕೇವಲ ದೇಹವನ್ನು ಸರಿಪಡಿಸುವುದು ಮಾತ್ರವಲ್ಲ ಮನಸ್ಸು, ದೇಹ ಮತ್ತು ಆತ್ಮ ಸೇರಿದ ಮೂರು ಅಂಶಗಳನ್ನು ಶುದ್ದೀಕರಿಸಲು ನೆರವಾಗುತ್ತದೆ. ಇದು ನಮ್ಮ ಮತ್ತು ಪ್ರಕೃತಿ ಮಾತೆಯ ಜೊತೆಗೆ ಸಂಪರ್ಕ ಕಲ್ಪಿಸುತ್ತದೆ ಎಂದರು.

ಯೋಗವು ನಮ್ಮನ್ನು ನೈಜತೆಯ ಹತ್ತಿರಕ್ಕೆ ಕೊಂಡೊಯ್ಯುತ್ತದೆ, ಜೀವನ ಶೈಲಿ ಹಾಗೂ ಪ್ರಜ್ಞೆ ರಚಿಸುವ ಮೂಲಕ ಹವಾಮಾನ ಬದಲಾವಣೆ ನಿಭಾಯಿಸಲು ಮತ್ತು ಯೋಗಕ್ಷೇಮವನ್ನು ಸುಧಾರಿಸಲು ಸಹಾಯ ಮಾಡುತ್ತದೆ ಎಂದು ಹೇಳಿದರು.

ಮನಸ್ಸು ಮತ್ತು ದೇಹ, ಚಿಂತನೆ ಮತ್ತು ಕ್ರಿಯೆ, ಸಂಯಮ ಮತ್ತು ಸಾರ್ಥಕತೆಯನ್ನು ಒಗ್ಗೂಡಿಸುತ್ತದೆ. ಹಾಗೆಯೇ ಪ್ರಕೃತಿ ಮತ್ತು ಮನುಷ್ಯನ ನಡುವೆ ಸಾಮರಸ್ಯವುಂಟು ಮಾಡುತ್ತದೆ ಎಂದು ತಿಳಿಸಿದರು. ವಿದ್ಯಾರ್ಥಿಗಳಿಂದ ಸೂರ್ಯ ನಮಸ್ಕಾರ, ಪ್ರಾಣಾಯಾಮ, ಶವಾಸನ, ಪದ್ಮಾಸನ, ಪಾದ ಹಸ್ತಾಸನಗಳನ್ನು ಮಾಡಿಸಿ, ಯೋಗಾಸನಗಳು, ಪ್ರಾಣಾಯಾಮ ಮತ್ತು ಷಟ್ ಕ್ರಿಯೆಗಳ ಮಹತ್ವವನ್ನು ಸಾರಿದರು.

ಪ್ರಾಂಶುಪಾಲರಾದ ಯತೀಶ್ ಆಚಾರ್ ಹಾಗೂ ಶಿಕ್ಷಕ ವರ್ಗ, ಸಿಬ್ಬಂದಿ ವರ್ಗ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

ಇಂದು ಬೆಳಿಗ್ಗೆ 10 ಗಂಟೆಯಿಂದ ಸಾಯಂಕಾಲ 5 ಗಂಟೆಯವರೆಗೆ 220 ಕೆವಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ನಗರದ ಹಾಗೂ ಎಲ್ಲಾ 11 ಕೆವಿ ಮಾರ್ಗಗಳಿಗೆ ವಿದ್ಯುತ್ ಸರಬರಾಜು ಇರುವುದಿಲ್ಲ. ಆದ್ದರಿಂದ ರಾಣೇಬೆನ್ನೂರು ನಗರ ಹಾಗೂ ರಾಣೇಬೆನ್ನೂರು 220 ಕೆವಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ 11 ಕೆವಿ ಗ್ರಾಮೀಣ ಫೀಡರ್‌ಗಳಾದ ಎಫ್-05 ಗಂಗಾಜಲ ತಾಂಡಾ ಐ.ಪಿ, ಎಫ್-08 ಎರೇಕುಪ್ಪಿ ಎನ್.ಜೆ.ವೈ, ಎಫ್-10 ಅಸುಂಡಿ ಐ.ಪಿ, ಎಫ್-12 ಫಾರೆಸ್ಟ್ ಐ.ಬಿ, ಎಫ್-13 ಕೆವಿಕೆ ಮತ್ತು ಎಫ್-14 ಕೂನಬೇವು ಫೀಡರ್‌ಗಳ ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಇರುವುದಿಲ್ಲ.

## ರೈಲ್ವೆ ನಿವೃತ್ತ ನೌಕರರ ಸಂಘದ ವಾರ್ಷಿಕ ಸಭೆ

ದಾವಣಗೆರೆ, ಜೂ. 21 - ಮೈಸೂರು ವಿಭಾಗೀಯ ರೈಲ್ವೆ ನಿವೃತ್ತಿದಾರರ ಸಂಘದ ವಾರ್ಷಿಕ ಮಹಾಸಭೆಯು ಇದೇ ದಿನಾಂಕ 25 ರ ಭಾನುವಾರ ಬೆಳಗ್ಗೆ 10-30ಕ್ಕೆ ಮೈಸೂರಿನ ಒಂಟಿಕೊಪ್ಪಲ್ ಸಿ.ಎಫ್.ಟಿ.ಆರ್.ಐ. ಶಾಲೆ ಬಳಿಯ ಶ್ರೀ ರಾಮ ಕಲ್ಯಾಣ ಮಂಟಪದಲ್ಲಿ ನಡೆಯ ಲಿದೆ ಎಂದು ನಿವೃತ್ತಿದಾರರ ಹರಿಹರ ಶಾಖೆ ಕಾರ್ಯದರ್ಶಿ ವಿ. ಗಣೇಶಯ್ಯ ತಿಳಿಸಿದ್ದಾರೆ.

## ಬಿತ್ತನೆ : ಇಳಿಕೆ

(1ನೇ ಪುಟದಿಂದ) ವರ್ಷ 9.52 ಲಕ್ಷ ಹೆಕ್ಟೇರ್ ಆಗಿದ್ದರೆ, ಈ ವರ್ಷ 9.21 ಲಕ್ಷ ಹೆಕ್ಟೇರ್ ಆಗಿದೆ. ಹತ್ತಿ ಬಿತ್ತನೆ ಪ್ರಮಾಣ 32.67 ಲಕ್ಷ ಹೆಕ್ಟೇರ್‌ನಿಂದ 28.02 ಲಕ್ಷ ಹೆಕ್ಟೇರ್‌ಗೆ ಇಳಿಕೆಯಾಗಿದೆ. ಕಬ್ಬು ಬಿತ್ತನೆ ಕಳೆದ ವರ್ಷ 50.76 ಲಕ್ಷ ಹೆಕ್ಟೇರ್ ಆಗಿದ್ದರೆ, ಈ ವರ್ಷ 50.74 ಲಕ್ಷ ಹೆಕ್ಟೇರ್ ಆಗಿದೆ. ಎಲ್ಲ ಪ್ರಮುಖ ಬೆಳೆಗಳ ಬಿತ್ತನೆ ಪ್ರಮಾಣ ಈ ಹಂಗಾಮಿನಲ್ಲಿ 129.53 ಲಕ್ಷ ಹೆಕ್ಟೇರ್ ಆಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 135.64 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿತ್ತು.

# ಕಮೀಷನ್ ಹಾವಳಿಯಿಂದ ಗುತ್ತಿಗೆದಾರರಿಗೆ ಸಮಸ್ಯೆ

**ಆರ್ಥಿಕತೆ ಸರಿಯಾಗಿಸಲು ಸಮಯ ಬೇಕು : ಸಿಎಂ**

ಬೆಂಗಳೂರು, ಜೂ. 23 - ಬಿಜೆಪಿ ಸರ್ಕಾರದ ಆರ್ಥಿಕ ಅಶಿಸ್ತು ಮತ್ತು ಕಮೀಷನ್ ಹಾವಳಿಯಿಂದ ಗುತ್ತಿಗೆದಾರರಿಗೆ ಸಮಸ್ಯೆ ಆಗಿದೆ. ಬಿಜೆಪಿ ಹಳಿ ತಪ್ಪಿಸಿರುವ ಆರ್ಥಿಕತೆಯನ್ನು ಸರಿಯಾಗಿಸಲು ಸ್ವಲ್ಪ ಸಮಯಾವಕಾಶ ಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಅವರ ನೇತೃತ್ವದ ನಿಯೋಗವು ತಮ್ಮನ್ನು ಭೇಟಿ ಮಾಡಿ ಬಾಕಿ ಇರುವ ಬಿಲ್ಲುಗಳ ಪಾವತಿಗೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ ಸಂದರ್ಭದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಮೀಷನ್ ಹಾವಳಿಗೆ ಕಡಿವಾಣ ಹಾಕಿ, ಸ್ಥಳೀಯ ಗುತ್ತಿಗೆದಾರರ ಹಿತಕ್ಕೆ ಧಕ್ಕೆ ಆಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಬಜೆಟ್ ಮಂಡನೆಯಾಗಬೇಕಿದೆ. ಬಜೆಟ್ ಅಧಿವೇಶನದ ನಂತರ ಬಿಬಿಎಂಪಿ ಹಾಗೂ ಆರ್ಥಿಕ ಇಲಾಖೆ ಕಾರ್ಯದರ್ಶಿಗಳ ಸಭೆ ಕರೆದು ಪರಿಶೀಲಿಸಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಬಿಬಿಎಂಪಿಯಲ್ಲಿ 2000 ಕೋಟಿ ರೂ.ಗಳು ಹಾಗೂ ನಗರೋತ್ಥಾನ ಯೋಜನೆಯಡಿ 1500 ಕೋಟಿ ರೂ.ಗಳು ಬಾಕಿ ಇರುವುದಾಗಿ ತಿಳಿಸಿದ ಕೆಂಪಣ್ಣ ಅವರು, ತಡೆಹಿಡಿದಿರುವ ಮೊತ್ತವನ್ನು ಪರಿಶೀಲಿಸಿ ಬಿಡುಗಡೆ ಮಾಡಬೇಕು ಹಾಗೂ ನಿರಾಕ್ಷೇಪಣಾ ಪತ್ರವನ್ನು ಬಿಡುಗಡೆ ಮಾಡಬೇಕೆಂದು ಕೆಂಪಣ್ಣ ಮನವಿ ಮಾಡಿದರು.

ಪದಾಧಿಕಾರಿಗಳಾದ ಆರ್.ಅಂಬಿಕಾಪತಿ, ಜಿ.ಎಂ ರವೀಂದ್ರ, ಸಂಕಾಗೌಡ ಶಾನಿ, ನಾಗರಾಜ್, ಆರ್.ಮಂಜುನಾಥ್, ರಮೇಶ್ ಮೊದಲಾದವರು ಉಪಸ್ಥಿತರಿದ್ದರು.



## ವಿದ್ಯುತ್ ದರ ಹೆಚ್ಚಳ ; ರಾಣೇಬೆನ್ನೂರು ವರ್ತಕರ ಪ್ರತಿಭಟನೆ

ರಾಣೇಬೆನ್ನೂರು, ಜೂ. 23- ವಿದ್ಯುತ್ ದರ ಹೆಚ್ಚಿಸಿರುವುದನ್ನು ವಿರೋಧಿಸಿ ಹುಬ್ಬಳ್ಳಿ ವಾಣಿಜ್ಯ ಸಂಸ್ಥೆಯ ಕರೆಯ ಮೇರೆಗೆ ಇಲ್ಲಿನ ವರ್ತಕ ಸಂಘದವರು ಪ್ರತಿಭಟನೆ ನಡೆಸಿ, ಶಾಸಕ ಪ್ರಕಾಶ ಕೋಳಿವಾಡ ಅವರಿಗೆ, ಹೆಸ್ಕಾಂ ಅಧಿಕಾರಿಗಳಿಗೆ ಹಾಗೂ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ವರ್ತಕ ಸಂಘದ ಅಧ್ಯಕ್ಷ ಜಿ.ಜಿ.ಹೊಟ್ಟಿಗೌಡ್ರ, ಮುಖಂಡರಾದ ಸದಾನಂದ ಉಪ್ಪಿನ, ವಿ.ಪಿ. ಲಿಂಗನಗೌಡ, ಮಲ್ಲಿಕಾರ್ಜುನ ಅರಳಿ, ಶಂಕರಗೌಡ ಮಾಳಗಿ, ಪ್ರಕಾಶ ಜಂಬಗಿ, ಕುಮಾರ ಜಂಬಗಿ, ಸುಜಿತ ಜಂಬಗಿ ಕಾಟನ್ ಮಾರ್ಕೆಟ್, ನೆಹರು ಮಾರ್ಕೆಟ,ಜವಳಿ, ಕಿರಾಣಿ ವರ್ತಕರು ಇನ್ನಿತರರು ಭಾಗವಹಿಸಿದ್ದರು.

## ಪರಿಸರ ಕೆರೆ ಸಂರಕ್ಷಣಾ ಸಮಿತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ



ದಾವಣಗೆರೆ, ಜೂ.23- ಜಿಲ್ಲೆಯ ತಾಲ್ಲೂಕುಗಳಲ್ಲಿ ನೆಲ, ಜಲ, ಪರಿಸರ ಹಾಗೂ ಕೆರೆ ಸಂರಕ್ಷಣೆ ವಿಚಾರದಲ್ಲಿ ಎಲ್ಲಾ ಇಲಾಖೆಯ ಮುಖ್ಯಸ್ಥರ ತುರ್ತು ಸಭೆ ಕರೆದು ಚರ್ಚಿಸುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಲಾಯಿತು. ನೆಲ, ಜಲ, ಪರಿಸರ ಹಾಗೂ ಕೆರೆ ಸಂರಕ್ಷಣಾ ಆಂದೋಲನ ಸಮಿತಿಯ ಜಿಲ್ಲಾ ಸಂಚಾಲಕರಾದ ರಾಂಪುರದ ಬಸವರಾಜ, ಕೆ.ಎಸ್.ಪ್ರಸಾದ್, ರಾಜ್ಯ ಸಂಚಾಲಕ ಬಲ್ಲೂರು ರವಿಕುಮಾರ್, ಜಿಲ್ಲಾ ಸಂಚಾಲಕರಾದ ಮಾಯಕೊಂಡ ಅಶೋಕ, ಅಣಬೇರು ಕುಮಾರಸ್ವಾಮಿ, ತಾಲ್ಲೂಕು ಸಂಚಾಲಕರಾದ ಪ್ರತಾಪ್ ಮಾಯಕೊಂಡ ಮತ್ತು ಶಿವಮೂರ್ತಪ್ಪ ಈ ಸಂದರ್ಭದಲ್ಲಿ ಹಾಜರಿದ್ದರು.

## ರೈತರ ಇ-ಕೆವೈಸಿ ನೋಂದಣಿಗೆ ಅವಕಾಶ

ದಾವಣಗೆರೆ, ಜೂ.23- ಕೇಂದ್ರ ಸರ್ಕಾರದ ಪಿ.ಎಮ್.ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ರೈತರು ಧನಸಹಾಯ ಪಡೆಯಲು ಇ-ಕೆವೈಸಿ ಮಾಡಿಸುವುದು ಕಡ್ಡಾಯವಾಗಿರುತ್ತದೆ.

ದಾವಣಗೆರೆ ತಾಲ್ಲೂಕಿನಲ್ಲಿ ಇನ್ನೂ 11738 ರೈತರ ಇ-ಕೆವೈಸಿ ಬಾಕಿ ಇದ್ದು, ರೈತರು ಇ-ಕೆವೈಸಿ ಮಾಡಿಸದಿದ್ದಲ್ಲಿ ಪಿ.ಎಮ್.ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ರೈತರಿಗೆ ನೀಡಲಾಗುವ ಆರ್ಥಿಕ ಧನಸಹಾಯ ಸ್ಥಗಿತಗೊಳಿಸಲಾಗುತ್ತದೆ.

ಇ-ಕೆವೈಸಿ ಮಾಡಿಸಿಕೊಳ್ಳದ ಫಲಾನುಭವಿಗಳಿಗೆ ಮುಂದೆ ಆರ್ಥಿಕ ಸೌಲಭ್ಯ ದೊರೆಯುವುದಿಲ್ಲ. ಹಾಗೂ ಈವರೆಗೂ ಇ-ಕೆವೈಸಿ ಮಾಡಿಸದ ರೈತ ಫಲಾನುಭವಿಗಳು ತಮ್ಮ ಆಧಾರ್ ಸಂಖ್ಯೆಗೆ ಜೋಡಣೆಯಾಗಿರುವ ಮೊಬೈಲ್ ಸಂಖ್ಯೆಯೊಂದಿಗೆ HYPERLINK 'http://pmkisan.gov.in/' \t '_blank'http://pmkisan.gov.in ಪಿ.ಎಂ.ಕಿಸಾನ್ ಪೋರ್ಟಲ್ ನ farmers corner ಅವಕಾಶದಡಿ ಆಧಾರ್ ಸಂಖ್ಯೆಯನ್ನು ನಂತರ ಆಧಾರ್ ಸಂಖ್ಯೆಯೊಂದಿಗೆ ಜೋಡಣೆಯಾದ ಮೊಬೈಲ್ ಸಂಖ್ಯೆಯನ್ನು ದಾಖಲಿಸಿಬೇಕು.

ಈ ಪ್ರಕ್ರಿಯೆಯ ನಂತರ ಸ್ವೀಕೃತವಾದ ಓಟಿಪಿಯನ್ನು ದಾಖಲಿಸಿ, ಸಬ್ಮಿಟ್ ಓಟಿಪಿ ಎಂಬ ಬಟನ್ ಒತ್ತುವ ಮೂಲಕ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಅಥವಾ ಸಮೀಪದ ಗ್ರಾಮಒನ್ ಕೇಂದ್ರ, ಸಾಮಾನ್ಯ ಗ್ರಾಹಕ ಸೇವಾ ಕೇಂದ್ರಗಳಿಗೆ ಭೇಟಿ ನೀಡಿ ಬಯೋಮೆಟ್ರಿಕ್ ಅಥವಾ ಓಟಿಪಿ ಮೂಲಕ, ಮೊಬೈಲ್‌ನಲ್ಲಿರುವ ಪ್ಲೇ ಸ್ಟೋರ್‌ನಲ್ಲಿ Facial Authentication mobile ಮೂಲಕ ಇ-ಕೆವೈಸಿ ಮಾಡಿಸಬಹುದು ಎಂದು ಜಿಲ್ಲಾ ಸಹಾಯಕ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಣೇಬೆನ್ನೂರು ತಾ.ನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ 11ಕೆವಿ ಎಫ್ 9- ರಿಲಾಯನ್ಸ್ ಮಾರ್ಗಕ್ಕೆ ವಿದ್ಯುತ್ ಸರಬರಾಜು ಇರುವುದಿಲ್ಲ.

ಮಾಗೋಡ ವ್ಯಾಪ್ತಿಯ: ಭವಾನಿ ರೈಸ್ ಮಿಲ್, ಯುಟಿಪಿ, ನಿಟ್ಟೂರ ಸ್ಕೂಲ್, ಕೆ.ಎಸ್.ಆರ್.ಟಿ.ಸಿ ಡಿಪೊ.

ಕಮದೋಡ ವ್ಯಾಪ್ತಿಯ: ಎಲ್ಲಾ ಸ್ಟೋನ್ ಕ್ರಷರ್, ರಿಲಾಯನ್ಸ್ ಪೆಟ್ರೋಲ್ ಬಂಕ್, ರೇನ್ ಬೊ ಸ್ಕೂಲ್, ಬಳ್ಳಾರಿ ಸ್ಕೂಲ್. ಹುಣಸಿಕಟ್ಟಿ ವ್ಯಾಪ್ತಿಯ: ಎಲ್ಲಾ ಸ್ಟೋನ್ ಕ್ರಷರ್. ಚಳಗೇರಿ ವ್ಯಾಪ್ತಿಯ: ಜೈನ್ ಸ್ಕೂಲ್.


## ರಸಗೊಬ್ಬರದ ಆತಂಕ ಬೇಡ : ಎಸ್ಸೆಸ್ಸೆಂ

(1ನೇ ಪುಟದಿಂದ) ಹೊಂದಲಾಗಿದ್ದು, ಈವರೆಗೆ ಕೇವಲ 1 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆ ಮಾಡಲಾಗಿದೆ. 47,772 ಕ್ವಿಂಟಾಲ್ ಬಿತ್ತನೆ ಬೀಜ ಇದ್ದು, ಈಗಾಗಲೇ 5,748 ವಿತರಣೆ ಮಾಡಲಾಗಿದೆ.

ಇನ್ನು 37,024 ಟನ್ ಬಿತ್ತನೆ ಬೀಜ ಇದೆ. ಅದೇ ರೀತಿ 1,54,962 ಟನ್ ರಸಗೊಬ್ಬರದ ಅವಶ್ಯಕತೆ ಇದ್ದು, ಜೂನ್ ಮಾಹೆಗೆ 29480 ಟನ್ ಬೇಕಾಗಿದೆ. ಜಿಲ್ಲೆಯಲ್ಲಿ 42089 ಟನ್ ರಸಗೊಬ್ಬರ ದಾಸ್ತಾನು ಇದೆ ಎಂದು ಸಚಿವರು ತಿಳಿಸಿದ್ದಾರೆ.

**ನಮ್ಮ ಪ್ರೀತಿಯ ತಂದೆ-ತಾಯಿಯವರ ಪುಣ್ಯಸ್ಮರಣೆ**

8ನೇ ವರ್ಷದ ಪುಣ್ಯಸ್ಮರಣೆ



ಲಿಂ॥ ಶರಣ ಎಸ್.ಕೆ. ಕೊಟ್ರಪ್ಪನವರು ಗೋಪನಾಳ್.
ನಿಧನ : 24-06-2015

ನೀವು ನಮ್ಮನ್ನಗಲಿ ವರ್ಷಗಳಾದರೂ ಸಹ ಸದಾ ನಿಮ್ಮ ಜೊತೆಯಲ್ಲಿದ್ದು, ನೀವು ತೋರಿದ ಹಾದಿಯಲ್ಲಿ ನಡೆಯುತ್ತಾ, ನಿಮ್ಮ ಆದರ್ಶಗಳನ್ನು ಪಾಲಿಸುತ್ತಿರುವ ನಮಗೆ ನಿಮ್ಮ ಆಶೀರ್ವಾದ ಸದಾ ಇರಲಿ.

10ನೇ ವರ್ಷದ ಪುಣ್ಯಸ್ಮರಣೆ



ಲಿಂ॥ ಶ್ರೀಮತಿ ಸರ್ವಮಂಗಳಮ್ಮನವರು ಗೋಪನಾಳ್.
ನಿಧನ : 04-11-2013

**ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗು ಸಣ್ಣಕಲ್ಲಪ್ಪರ ವಂಶಸ್ಥರು, ಗೋಪನಾಳ್, ದಾವಣಗೆರೆ ತಾ॥ ಮತ್ತು ಜಿಲ್ಲೆ.**

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ದಾವಣಗೆರೆ, ಜೂ.23- ಪ್ರೇರಣಾ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಜಿಲ್ಲಾ ಮಟ್ಟದ ಪ್ರೇರಣಾ ಪ್ರತಿಭಾ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. 2022-23ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.75ಕ್ಕಿಂತ ಹೆಚ್ಚು ಅಂಕ ಪಡೆದು ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಜುಲೈ 23 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಚನ್ನಗಿರಿ ವಿರುಪಾಕ್ಷಪ್ಪ ಕಲ್ಯಾಣ ಮಂಟಪದಲ್ಲಿ ಸಂಸ್ಥೆಯಿಂದ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು. ವಿವರಕ್ಕೆ ಮೊ: 97314 24099, 9731289333 ಸಂಪರ್ಕಿಸು ವಂತೆ ಸಂಸ್ಥೆಯ ಅಧ್ಯಕ್ಷ ಚೇತನ ಶಿವಕುಮಾರ್ ತಿಳಿಸಿದ್ದಾರೆ.

## ಪದ್ಮಸಾಲಿ ಯುವಕರ ಸಂಘದಿಂದ ಪುರಸ್ಕಾರ

ದಾವಣಗೆರೆ, ಜೂ.23- ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ (ನೇಕಾರ) ಯುವಕರ ಸಂಘದಿಂದ ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಶೇ.80 ರಷ್ಟು ಅಂಕ ಗಳಿಸಿ ಉತ್ತೀರ್ಣರಾದ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು, ಸಮಾಜದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಇದೇ ದಿನಾಂಕ 25 ಅಂತಿಮ ದಿನ. ವಿವರಕ್ಕೆ ಸಂಪರ್ಕಿಸಿ : 98866 14722.

# ಆರೋಗ್ಯವಂತರಾಗಲು ಯೋಗ ಅಗತ್ಯ



**ಭಾರತ ಸೇವಾದಳ ಜಿಲ್ಲಾ ಅಧ್ಯಕ್ಷ ಪ್ರೊ. ಚನ್ನಪ್ಪ ಹೆಚ್. ಪಲ್ಲಾಗಟ್ಟೆ**

ದಾವಣಗೆರೆ, ಜೂ.22- ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಾಗಿರಲು ಮನುಷ್ಯನಿಗೆ ಪ್ರತಿನಿತ್ಯ ಯೋಗಾಭ್ಯಾಸದ ಅನಿವಾರ್ಯತೆ ಇದೆ ಎಂದು ಭಾರತ ಸೇವಾದಳ ಜಿಲ್ಲಾ ಅಧ್ಯಕ್ಷ ಪ್ರೊ. ಚನ್ನಪ್ಪ ಹೆಚ್. ಪಲ್ಲಾಗಟ್ಟೆ ಅಭಿಪ್ರಾಯಪಟ್ಟರು.

ನಗರದ ಭಾರತ ಸೇವಾದಳ ಭವನದಲ್ಲಿ ಮೊನ್ನೆ ನಡೆದ ವಿಶ್ವ ಯೋಗ ದಿನಾಚರಣೆ ಮತ್ತು ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪತಂಜಲಿ ಮಹರ್ಷಿಗಳು ನೀಡಿದ ಸೂತ್ರದ ಆಧಾರದ ಮೇಲೆ ಯೋಗ ಶಿಕ್ಷಣವು ಜಾರಿಯಲ್ಲಿದ್ದು, ಇದು ಭಾರತದ ಸನಾತನ ಸಂಸ್ಕೃತಿಯಾಗಿ ವಿಶ್ವಕ್ಕೆ ವಿಶೇಷವಾದ ಭಾರತದ ಕೊಡುಗೆಯಾಗಿದೆ ಎಂದರು.

ಜಿಲ್ಲಾ ಪರಿಸರ ಅಧಿಕಾರಿ ಡಾ. ಎಚ್. ಲಕ್ಷ್ಮಿಕಾಂತ್ ಗಿಡಕ್ಕೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಪರಿಸರ ಮಾಲಿನ್ಯ, ಪರಿಸರ ಸಂರಕ್ಷಣೆಯ, ತ್ಯಾಜ್ಯ ವಿಲೇವಾರಿ ಮಾಡುವ ಬಗ್ಗೆ ಹಾಗು ಗಿಡಗಳನ್ನು ಬೆಳೆಸುವ ಬಗ್ಗೆ ಮಾತನಾಡಿದರು.

ಮಾಜಿ ಕುಲಸಚಿವ ಪ್ರೊ. ಎನ್.ಕೆ. ಗೌಡ ಮಾತನಾಡಿ, ಅಷ್ಟಾಂಗ ಯೋಗಗಳ ಮಹತ್ವವನ್ನು ತಿಳಿಸಿದರು.

ಯೋಗ ಒಂದು ದಿನಕ್ಕೆ ಸೀಮಿತವಾಗದೆ ನಿರಂತರವಾಗಿ ಜೀವನದಲ್ಲಿ ಅನುಷ್ಠಾನವಾಗಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀಮತಿ ಉಮಾ ವೀರಭದ್ರಪ್ಪ ಉಪಸ್ಥಿತರಿದ್ದರು. ವಲಯ ಸಂಘಟಕ ಎಂ. ಅಣ್ಣಪ್ಪ ಕಾರ್ಯಕ್ರಮವನ್ನು ನಿರೂಪಿಸಿದರು. ಜಿಲ್ಲಾ ಕಾರ್ಯದರ್ಶಿ ಅರವಿಂದ್ ಜೆ. ಕೂಲಂಬಿ ಸ್ವಾಗತಿಸಿದರು. ಕೆ.ಪಿ. ಶ್ರೀಕಾಂತ್ ವಂದಿಸಿದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

ಹರಟೆ...

## ಗ್ಯಾರಂಟಿ ಭಾಗ್ಯ...!



ಏನಪಾ ಕಾಲೇಜಿಗೆ ಹೋಗ್ತಾ ಇದಿಯಾ?

**ಹೌದು ಅಂಕಲ್. ಕ್ಲಾಸ್‌ಗಳನ್ನು ಮಿಸ್ ಮಾಡಬಾರದು.**

ಹೇ ಓದೋದಿಕ್ಕೆ ಯಾಕೆ ತಲೆ ಕೆಡಿಸ್ಕೋತಿರಾ! ಇನ್ಮೇಲೆ ಭಾಗ್ಯಗಳ ಬಾಗಿಲು ತೆರೆದಿದೆ. ಅದೂ ಅಲ್ದೇ ನಿಮಗೆ ಮೀಸಲಾತಿ ಸೌಲಭ್ಯ ಇರೋದರಿಂದ ಕಷ್ಟ ಯಾಕೆ ಪಡ್ತೀರೋ?

**ನಾನೂ ಅದೇ ಯೋಚನೆ ಮಾಡ್ತಾ ಇದ್ದೆ. ಹಲವು ಭಾಗ್ಯಗಳ ಬ್ಯಾಗಿದೆ ಗ್ಯಾರಂಟಿಗಳ ನಂಟಿದೆ ಹಾಯಾಗಿರೋಣ ಅಂತಾ ಮಲಗಿಕೊಂಡಿದ್ದೆ. ಕನಸಲ್ಲಿ ನಮ್ಮ ಬಾಬಾ ಸಾಹೇಬ್ ಅಂಬೇಡ್ಕರ್ ಬಂದಿದ್ರು!**

ಹೌದಾ!? ಏನಂದ್ರು?

**ನೋಡಪಾ.. ಈ ಸೌಲಭ್ಯಗಳನ್ನು ಪಡೆಯೋ ಮುನ್ನ ಸ್ವಲ್ಪ ಯೋಚಿಸು. ಇವು ನಿನಗೆ ತೀರಾ ಅಗತ್ಯವಾಗಿದ್ದರೆ ತೆಗೆದುಕೋ. ಇಲ್ಲದಿದ್ದರೆ ಬೇಡ. ದುಡಿಯುವ ಸಾಮರ್ಥ್ಯವಿದ್ದೂ ತೆಗೆದುಕೊಂಡರೆ ಭಾಗ್ಯ ಭಿಕ್ಷೆಯಾಗುತ್ತದೆ ಎಂದರು.**

ಅದಕ್ಕೆ ನೀನೇನು ಹೇಳಿದೆ..?

**ನೀವೇಳಿದ್ದೂ ಸರಿ ಸ್ವಾಮಿ. ಆದರೆ ಈ ಗ್ಯಾರಂಟಿಗಳ ಬಗ್ಗೆ ಆಸೆ ಹುಟ್ಟುತ್ತಲ್ಲಾ ಏನು ಮಾಡ್ಲಿ ಎಂದು ಕೇಳಿದೆ. ಅದಕ್ಕೆ ಅವರು ಈ ಸೌಲಭ್ಯಗಳು ಸೂಕ್ತವೆನಿಸಿ, ಅಶಕ್ತರ ಪಾಲಿಗೆ ತಲುಪಿದರೆ ಒಳ್ಳೆಯದು. ಇಲ್ಲಾ ನೀವು ದುಡಿಯಲು ಶಕ್ತರಾಗಿದ್ದರೂ ಇವನ್ನ ತಗೊಳ್ಳಿ ಎಂದು ರಾಜಕಾರಣಿಗಳು ಆಮಿಷ ಒಡ್ಡಿದರೆ ಅದು ಲಂಚ ಆಗುತ್ತೆ ಅಂದ್ರು.**




ಅಲ್ಲಪಾ, ಜನ ಶಕ್ತರಾಗಿದ್ದು ಪುಗಸಟ್ಟೆ ಸಿಗುವ ಭಾಗ್ಯ ತಗೊಂಡ್ರೆ ಅದು ಭಿಕ್ಷೆ. ರಾಜಕಾರಣಿಗಳು ದುಡಿಯುವ ತಾಕತ್ತಿರುವ ಜನರಿಗೆ ಈ ಗ್ಯಾರಂಟಿ ಸೌಲಭ್ಯ ಕೊಟ್ಟರೆ ಇದು ಲಂಚ! ಅಂದ್ರೆ ಯಾವ ಭಾಗ್ಯ ತಗೋಬೇಕು?

**ನಾನೂ ಅದನ್ನೇ ಕೇಳಿದೆ. ಅವರು ಹೇಳಿದ್ರು. ಕಷ್ಟಪಟ್ಟು ಅವಮಾನಗಳನ್ನು ಸಹಿಸಿಕೊಂಡು ನಾನು ಒಂದು ಭಾಗ್ಯ ಗಳಿಸಿದೆ, ಅದರಿಂದ ಭಾರತದ ಭಾಗ್ಯವನ್ನು ಅಂದರೆ ಸಂವಿಧಾನವನ್ನು ಬರೆದೆ. ಭಾರತ ರತ್ನ ಎನಿಸಿಕೊಂಡೆ. ಅದೇ ರೀತಿ ಬಡತನದಲ್ಲಿ ಹುಟ್ಟಿ, ದಿನ ಪತ್ರಿಕೆಗಳನ್ನು ಹಂಚುತ್ತಾ ದುಡಿದು ವಿಜ್ಞಾನಿಯಾಗಿ ಗೌರವಿಸಲ್ಪಟ್ಟು ದೇಶದ ರಾಷ್ಟ್ರಪತಿಯಾಗಿ ಕೀರ್ತಿ ಗಳಿಸಿದ ಅಬ್ದುಲ್ ಕಲಾಂರವರು, ಚಹಾ ಮಾರುತ್ತಾ ವ್ಯಾಸಂಗ ಮಾಡಿ, ರಾಜಕೀಯ ಪ್ರವೇಶಿಸಿ ಪ್ರಧಾನಿಯಾದ ನರೇಂದ್ರ ಮೋದಿ ಅವರು, ಕೇವಲ ಕುಣಿಯಲು ಹೋಗುತ್ತಿದ್ದವರು ಮೇಷ್ಟ್ರು ಮಾತು ಕೇಳಿ ಶಾಲೆಗೆ ಹೋಗಿ ಮುಂದೆ ವಕೀಲರಾಗಿ ಈಗ ಮುಖ್ಯಮಂತ್ರಿಯಾಗಿರುವ ಸಿದ್ಧರಾಮಯ್ಯ ನವರು. ನಮ್ಮೆಲ್ಲರ ಯಶಸ್ಸಿಗೆ ಕಾರಣವಾದ ಈ ಭಾಗ್ಯವನ್ನು ನಿಮ್ಮಂತಹ ಯುವಕರು ಇದನ್ನು ಪಡೆಯಬೇಕು.**

ಯಾವ ಭಾಗ್ಯ...?

**ಶಿಕ್ಷಣ ಭಾಗ್ಯ... !**

## ಶೇ.20ರವರೆಗೆ ಉಳಿತಾಯ

(1ನೇ ಪುಟದಿಂದ)
ಉಳಿತಾಯವಾಗುತ್ತದೆ. ಈ ಉಳಿತಾಯದ ಆಯ್ಕೆ ವಾಣಿಜ್ಯ ಹಾಗೂ ಕೈಗಾರಿಕಾ ಬಳಕೆದಾರರಿಗೂ ಲಭ್ಯವಾಗಲಿದೆ. 10 ಕೆ.ಡಬ್ಲ್ಯೂ.ಗಿಂತ ಹೆಚ್ಚು ವಿದ್ಯುತ್ ಬಳಸುವವರಿಗೆ ಈ ಪದ್ಧತಿ ಬರುವ ಏಪ್ರಿಲ್ 1, 2024ರಿಂದ ಜಾರಿಗೆ ಬರಲಿದೆ. ಕೃಷಿ ಹೊರತಾಗಿ ಉಳಿದೆಲ್ಲ ಗ್ರಾಹಕರಿಗೆ ಈ ಪದ್ಧತಿ ಏಪ್ರಿಲ್ 1, 2025ರಿಂದ ಜಾರಿಗೆ ಬರಲಿದೆ.

2020ರ ವಿದ್ಯುತ್ ಬಳಕೆ ಗ್ರಾಹಕರ ಹಕ್ಕು ನಿಯಮಗಳಿಗೆ ತಿದ್ದುಪಡಿ ತರುವ ಮೂಲಕ ಕೇಂದ್ರ ಸರ್ಕಾರ ನೂತನ ಪದ್ಧತಿಗೆ ದಾರಿ ಮಾಡಿಕೊಟ್ಟಿದೆ ಎಂದು ವಿದ್ಯುತ್ ಸಚಿವಾಲಯದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಇಡೀ ದಿನದ ಬಳಕೆಗೆ ಒಂದೇ ರೀತಿಯ ದರ ನಿಗದಿಯ ಬದಲು, ಬಳಕೆಯ ಸಮಯವನ್ನು ಆಧರಿಸಿ, ದರ ನಿಗದಿಪಡಿಸಲಾಗುವುದು. ಸೌರ ಶಕ್ತಿ ಹೆಚ್ಚಾಗಿ ಲಭ್ಯವಿರುವ ಎಂಟು ಗಂಟೆಗಳನ್ನು ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗ ನಿಗದಿ ಪಡಿಸಲಿದೆ. ಈ ಅವಧಿಯಲ್ಲಿ ವಿದ್ಯುತ್ ಬಳಸಿದವರಿಗೆ ಶೇ.10 ರಿಂದ ಶೇ.20ರವರೆಗೆ ಉಳಿತಾಯ ವಾಗಲಿದೆ ಎಂದು ತಿಳಿಸಲಾಗಿದೆ.

ಈ ಪದ್ಧತಿ ಗ್ರಾಹಕರಿಗೆ ಹಾಗೂ ವಿದ್ಯುತ್ ಪೂರೈಕೆದಾರರಿಬ್ಬರಿಗೂ ಅನುಕೂಲ ತರಲಿದೆ. ಸೌರ ವಿದ್ಯುತ್ ಉತ್ಪಾದನಾ ವೆಚ್ಚ ಕಡಿಮೆ ಇದೆ. ಹೀಗಾಗಿ ಸೌರ ಶಕ್ತಿ ಲಭ್ಯವಿರುವಾಗ ಬಳಸಲಾಗುವ ವಿದ್ಯುತ್ ದರವೂ ಕಡಿಮೆ ಇರಲಿದೆ ಎಂದು ಕೇಂದ್ರ ನವೀಕರಣ ಇಂಧನ ಸಚಿವ ಆರ್.ಕೆ. ಸಿಂಗ್ ತಿಳಿಸಿದ್ದಾರೆ. ಬಹುತೇಕ ರಾಜ್ಯ ನಿಯಂತ್ರಣ ಆಯೋಗಗಳು ಈಗಾಗಲೇ ಸಮಯ ಆಧರಿತ ದರ ಪದ್ಧತಿಯನ್ನು ದೊಡ್ಡ ವಾಣಿಜ್ಯೋದ್ಯಮಗಳಿಗೆ ಜಾರಿಗೆ ತಂದಿವೆ.

ಕೇಂದ್ರ ಸರ್ಕಾರಗಳ ನಿಯಮಗಳ ಅನ್ವಯ ಮನೆ ಬಳಕೆದಾರರಿಗೂ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಕೆ ಮಾಡಲಾಗುವುದು. ಇದಕ್ಕಾಗಿ ನಿಯಮಗಳನ್ನು ಸರಳೀಕರಣ ಮಾಡಲಾಗಿದೆ.

# ಕೇಂದ್ರದ ಯೋಜನೆಗಳಿಗೆ ಪ್ರಚಾರದ ಕೊರತೆ

## ಲೀಡ್ ಬ್ಯಾಂಕ್ ಗ್ರಾಹಕ ಸಂಪರ್ಕ ಕಾರ್ಯಕ್ರಮದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ




ದಾವಣಗೆರೆ, ಜೂ.23- ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ, ಜೀವನ್ ಜ್ಯೋತಿ ಯೋಜನೆ, ಅಟಲ್ ಪಿಂಚಣಿ, ಮುದ್ರಾ ಯೋಜನೆ ಮೊದಲಾದ ಯೋಜನೆಗಳ ಬಗ್ಗೆ ಇನ್ನೂ ಹೆಚ್ಚಿನ ಜನರಿಗೆ ತಿಳಿದಿಲ್ಲ. ಈ ಯೋಜನೆಗಳ ಬಗ್ಗೆ ಪ್ರಚಾರ ಮಾಡಿ ಹೆಚ್ಚಿನ ಅರಿವು ಮೂಡಿಸುವ ಅಗತ್ಯವಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ಕೆನರಾ ಬ್ಯಾಂಕ್ ಲೀಡ್ ಬ್ಯಾಂಕ್ ವತಿಯಿಂದ ನಗರದ ರೋಟರಿ ಬಾಲಭವನದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಗ್ರಾಹಕ ಸಂಪರ್ಕ ಕಾರ್ಯಕ್ರಮ ಉದ್ಘಾಟಿಸಿ, ಕೇಂದ್ರ ಯೋಜನೆಗಳ ಫಲಾನುಭವಿಗಳಿಗೆ ಚೆಕ್ ವಿತರಿಸಿ ಅವರು ಮಾತನಾಡಿದರು.

ಸುರಕ್ಷಾ ಬಿಮಾ ಹಾಗೂ ಜೀವನ್ ಜ್ಯೋತಿ ಯೋಜನೆಯಡಿ ವಿಮೆ ಮಾಡಿಸಿದ್ದವರು ಕಳೆದ ಕೋವಿಡ್ ಸಂದರ್ಭದಲ್ಲಿ ಮೃತಪಟ್ಟಾಗ ಅವರ ಕುಟುಂಬ ವರ್ಗಕ್ಕೆ ವಿಮೆಯ ಹಣದಿಂದ ಸಾಕಷ್ಟು ನೆರವಾಗಿದೆ. ಈ ಬಗ್ಗೆ ಕುಟುಂಬದವರೂ ಹೇಳಿಕೊಂಡಿದ್ದಾರೆ. ಆದರೆ ಹೆಚ್ಚಿನ ಜನರಿಗೆ ಈ ಯೋಜನೆಗಳ ಬಗ್ಗೆ ಅರಿವಿಲ್ಲ ಎಂದರು.

ಲೀಡ್ ಬ್ಯಾಂಕ್ ವತಿಯಿಂದ ಯೋಜನೆಗಳ ಬಗ್ಗೆ ಹೆಚ್ಚಿನ ಪ್ರಚಾರ ಮಾಡುವಂತೆ ಹೇಳಲಾಗಿದೆ. ಇದರ ಅಂಗವಾಗಿಯೇ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಯೋಜನೆಗಳ ಅರಿವು ಮೂಡಿಸುವಲ್ಲಿ ಮಾಧ್ಯಮಗಳ ಪಾತ್ರವೂ ಪ್ರಮುಖವಾಗಿದೆ ಎಂದು ಹೇಳಿದರು.

**ಲೆಕ್ಕ ಕೊಡದ ಅಧಿಕಾರಿಗಳು:** ಕೇಂದ್ರ ಸರ್ಕಾರದ ಯೋಜನೆಗಳಿಂದ ಎಷ್ಟು ಜನರು ವಿಮಾ ಸೌಲಭ್ಯ ಪಡೆದಿದ್ದಾರೆ ಎಂದು ಅಧಿಕಾರಿಗಳನ್ನು ಕೇಳಿದರೆ, ಇಲ್ಲಿಯವರೆಗೂ ಲೆಕ್ಕ ಕೊಟ್ಟಿಲ್ಲ ಎಂದು ಸಂಸದ ಸಿದ್ದೇಶ್ವರ ಬೇಸರ ವ್ಯಕ್ತಪಡಿಸಿದರು.

ಅಧಿಕಾರಿಗಳು ಲೆಕ್ಕ ಕೊಡಬೇಕೋ? ಅಥವಾ ಬ್ಯಾಂಕ್‌ನವರು ಕೊಡಬೇಕೋ ಗೊತ್ತಿಲ್ಲ. ಒಟ್ಟಿನಲ್ಲಿ ಸರಿಯಾದ ಲೆಕ್ಕ ಕೊಡುತ್ತಿಲ್ಲ ಎಂದರು.

**ಜೀವ ರಕ್ಷಕ ಮೋದಿ:** ಕೊವಿಡ್ ಸಂದರ್ಭದಲ್ಲಿ ಉಚಿತವಾಗಿ ಲಸಿಕೆ ನೀಡುವ ಮೂಲಕ ಮೋದಿ ನಮ್ಮ ಜೀವ ರಕ್ಷಕರಾಗಿದ್ದಾರೆ ಎಂದು ಸಿದ್ದೇಶ್ವರ ಹೇಳಿದರು. ಹೊರ ದೇಶದ ಜನರು ಸಾವಿರಾರು ರೂಪಾಯಿ ಕೊಟ್ಟು ಕೊವಿಡ್ ಲಸಿಕೆ ಖರೀದಿಸಿದರು. ಆದರೆ ನಮ್ಮ ದೇಶದಲ್ಲಿ 110 ಕೋಟಿ ಜನರಿಗೆ ಉಚಿತವಾಗಿ ಲಸಿಕೆ ನೀಡಲಾಯಿತು. ಅಷ್ಟೇ ಅಲ್ಲ, ನೆರೆಯ ದೇಶಗಳಿಗೂ ಲಸಿಕೆ ಕಳುಹಿಸಿಕೊಡಲಾಯಿತು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಲೀಡ್ ಬ್ಯಾಂಕ್ ಪ್ರಾದೇಶಿಕ ಕಚೇರಿಯ ಸಹಾಯಕ ಪ್ರಧಾನ ವ್ಯವಸ್ಥಾಪಕ ವೈ.ವಿ.ಎನ್. ಶಿವಪ್ರಸಾದ್ ಮಾತನಾಡಿ, ಕೇಂದ್ರ ಸರ್ಕಾರವು ಬ್ಯಾಂಕ್‌ಗಳ ಮೂಲಕ ಅನೇಕ ಉಪಯುಕ್ತ ಸೌಲಭ್ಯಗಳನ್ನು ನೀಡುತ್ತಿದೆ. ಬ್ಯಾಂಕ್‌ಗಳಿಗೆ ಗುರಿ ನಿಗದಿಪಡಿಸಿ ಯೋಜನೆಗಳ ಉಪಯೋಗ ಹೆಚ್ಚಾಗುವಂತೆ ಮಾಡುತ್ತಿದೆ ಎಂದರು.

ನಾಗನೂರು ಬಳಿ ಗೌರಿ ರೈಸ್ ಇಂಡಸ್ಟ್ರೀಸ್‌ಗಾಗಿ 4 ಕೋಟಿ ರೂ. ಚೆಕ್ ಪಡೆದ ಫಲಾನುಭವಿ ಹಾಗೂ ವಾಲ್ಮೀಕಿ ಸಂಘಕ್ಕೆ 15 ಲಕ್ಷ ರೂ. ಚೆಕ್ ಪಡೆದ ಹಾಲಮ್ಮ ಅನಿಸಿಕೆ ಹಂಚಿಕೊಂಡರು. ಕಾರ್ಯಕ್ರಮಕ್ಕೂ ಮುನ್ನ ಸಾಮಾಜಿಕ ಭದ್ರತಾ ಯೋಜನೆಗಳ ಬಗ್ಗೆ ಅಜ್ಜಪ್ಪ ಮಾತನಾಡಿದರು.

ಲೀಡ್ ಬ್ಯಾಂಕ್ ವಿಭಾಗೀಯ ಪ್ರಬಂಧಕ ಜಿ.ಸಿ. ಪ್ರಕಾಶ್ ಅತಿಥಿಗಳನ್ನು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಡಿಸಿಸಿ ಬ್ಯಾಂಕ್ ಸಿಇಓ ತಾವರ್‍ಯಾನಾಯ್ಕ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಪ್ರಾದೇಶಿಕ ವ್ಯವಸ್ಥಾಪಕ ಪ್ರವೀಣ್ ಪ್ರಭಾಕರ್, ಶ್ರೀಮತಿ ರಶ್ಮಿ ರೇಖಾ ಇತರರು ಉಪಸ್ಥಿತರಿದ್ದರು. ಕೆ.ರಾಘವೇಂದ್ರ ನಾಯರಿ ಕಾರ್ಯಕ್ರಮ ನಿರೂಪಿಸಿದರು.

### 49.23 ಕೋಟಿ ಜನಧನ್ ಖಾತೆ, 2 ಲಕ್ಷ ಕೋಟಿ ಹಣ

ದೇಶದಲ್ಲಿ ಇಲ್ಲಿಯವರೆಗೆ ಸುಮಾರು 49.23 ಕೋಟಿ ಜನರು ಶೂನ್ಯ ಬ್ಯಾಲೆನ್ಸ್‌ನ ಜನಧನ್ ಖಾತೆಗಳನ್ನು ತೆರೆದಿದ್ದು, ಸುಮಾರು 2 ಲಕ್ಷ ಕೋಟಿ ಹಣವನ್ನು ಈ ಖಾತೆಯಲ್ಲಿಡಲಾಗಿದೆ ಎಂದು ಸಂಸದ ಸಿದ್ದೇಶ್ವರ ಮಾಹಿತಿ ನೀಡಿದರು. 27 ಕೋಟಿ ಮಹಿಳೆಯರು ಬ್ಯಾಂಕುಗಳಲ್ಲಿ ಜನಧನ್ ಖಾತೆ ತೆರೆದಿರುವುದು ವಿಶೇಷ. ಅಲ್ಲದೆ ಅಷ್ಟು ಮೊತ್ತದ ಹಣವನ್ನು ಉಳಿಕೆ ಮಾಡಿ ಖಾತೆಯಲ್ಲಿಟ್ಟಿರುವುದಕ್ಕೆ ಸಂಸದರು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ 3 ಲಕ್ಷ ಜನರು ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ ಹಾಗೂ 1.38 ಲಕ್ಷ ಜನರು ಜೀವನ್ ಜ್ಯೋತಿ ಬಿಮಾ ಯೋಜನೆಗೆ ನೋಂದಾಯಿಸಿಕೊಂಡಿದ್ದಾರೆ ಎಂದು ಹೇಳಿದು.

### ದೊಡ್ಡಣ್ಣನ ಪದವಿ ಪಡೆಯೋಣ

ಪ್ರಧಾನಿ ನರೇಂದ್ರ ಮೋದಿ ಕೇವಲ ನಮ್ಮ ದೇಶಕ್ಕಷ್ಟೇ ನಾಯಕರಲ್ಲ. ದೊಡ್ಡಣ್ಣ ಎಂದು ಕರೆಯಿಸಿಕೊಳ್ಳುವ ಅಮೆರಿಕಾವನ್ನೂ ಮೀರಿಸುವ ಶಕ್ತಿ ಭಾರತಕ್ಕಿದೆ ಎಂದು ಸಂಸದ ಸಿದ್ದೇಶ್ವರ ಹೇಳಿದರು.

ನೆರೆಯ ಹಲವಾರು ದೇಶಗಳು ಈಗಾಗಲೇ ದಿವಾಳಿಯಾಗಿವೆ. ಆದರೆ ಭಾರತ ಆರ್ಥಿಕತೆಯಲ್ಲಿ ವಿಶ್ವದ 5ನೇ ಸ್ಥಾನದಲ್ಲಿದೆ.

ಒಂದು ಕಾಲದಲ್ಲಿ ವೀಸಾ ನೀಡಲು ನಿರಾಕರಿಸಿದ್ದ ಅಮೆರಿಕಾ ಇಂದು ರೆಡ್ ಕಾರ್ಪೆಟ್ ಹಾಕಿ ಮೋದಿ ಅವರನ್ನು ಸ್ವಾಗತಿಸಿದೆ. ಅಮೆರಿಕಾದೊಂದಿಗೆ ಹಲವಾರು ಯೋಜನೆಗಳಿಗೆ ಪ್ರಧಾನಿ ಒಪ್ಪಂದ ಮಾಡಿಕೊಂಡಿದ್ದಾರೆ. ಇದು ದೇಶದ ಆರ್ಥಿಕತೆ ಮತ್ತಷ್ಟು ಸದೃಢಗೊಳ್ಳಲು ಸಹಕಾರಿಯಾಗಿದೆ.

ಮೋದಿ ಅವರ ಯೋಜನೆಗಳನ್ನು ಸದ್ಬಳಕೆ ಮಾಡಿಕೊಂಡು ಬಾಳು ಹಸನು ಮಾಡಿಕೊಳ್ಳಿ. ಮುಂಬರುವ ಚುನಾವಣೆಯಲ್ಲಿ ಮತ್ತೆ ಅವರನ್ನು ಪ್ರಧಾನಿ ಮಾಡುವ ಮೂಲಕ 'ವಿಶ್ವದ ದೊಡ್ಡಣ್ಣ' ಎಂಬ ಪದವಿಯನ್ನು ಭಾರತ ಪಡೆಯುವಂತೆ ಮಾಡೋಣ ಎಂದು ಸಿದ್ದೇಶ್ವರ ಹೇಳಿದರು.

## ಎಚ್ಚರ ವಹಿಸಿ ಮಲೇರಿಯಾದಿಂದ ಪಾರಾಗಲು ಕರೆ



ಚಳ್ಳಕೆರೆ

ಚಳ್ಳಕೆರೆ, ಜೂ. 22- ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರ, ಮೀರಾಸಾಬಿಹಳ್ಳಿ ವ್ಯಾಪ್ತಿಗೆ ಬರುವ ತರೀಕೆರೆ ಗ್ರಾಮದ ಎನ್‌ಎಸ್‌ವಿಕೆ ಪ್ರೌಢಶಾಲೆಯಲ್ಲಿ ಮಲೇರಿಯಾ ವಿರೋಧಿ ಮಾಸಾಚರಣೆ ಕಾರ್ಯಕ್ರಮವನ್ನು ನಡೆಸಲಾಯಿತು.

ಶೂನ್ಯ ಮಲೇರಿಯಾ ಗುರಿಯನ್ನು ತಲುಪೋಣ, ನವೀನ ವಿಧಾನ ಅಳವಡಿಸಿ ಅನುಷ್ಠಾನಗೊಳಿಸೋಣ. ಘೋಷಣೆಯಲ್ಲಿ ನಡೆದ ಕಾರ್ಯಕ್ರಮವನ್ನುದ್ದೇಶಿಸಿ ಆರೋಗ್ಯ ನಿರೀಕ್ಷಣಾಧಿಕಾರಿ ಸಿ.ಎನ್. ನವೀನ್‌ಕುಮಾರ್ ಮಾತನಾಡಿ, ವಿದ್ಯಾರ್ಥಿಗಳಿಗೆ ಮಲೇರಿಯಾ ಜ್ವರ ಹೆಣ್ಣು ಅನಫಿಲಿಸ್ ಸೊಳ್ಳೆ ಕಚ್ಚುವುದರಿಂದ ಬರುತ್ತದೆ. ಈ ಸೊಳ್ಳೆ ಕೆರೆ, ಕಟ್ಟೆ, ಬಾವಿ,ಕೃಷಿ ಹೊಂಡ, ಚೆಕ್‌ಡ್ಯಾಂ ಮುಂತಾದ ನೀರು ಇರುವ ದೊಡ್ಡ ದೊಡ್ಡ ಸ್ಥಳಗಳಲ್ಲಿ ತನ್ನ ಸಂತಾನ ಉತ್ಪತ್ತಿ ಮಾಡಿ ಮನುಷ್ಯರಿಗೆ ಕಚ್ಚುವುದರ ಮೂಲಕ ಮಲೇರಿಯಾ ಹರಡುತ್ತದೆ. ಚಳಿ, ವಿಪರೀತ ಜ್ವರ,ಸುಸ್ತು ಈ ಲಕ್ಷಣಗಳು ಕಂಡು ಬಂದರೆ ತಕ್ಷಣ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆದುಕೊಳ್ಳಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳಾದ ಶಕುಂತಲಮ್ಮ, ಮಂಜುಳಾ, ಸಮುದಾಯ ಆರೋಗ್ಯ ಅಧಿಕಾರಿಗಳಾದ ಸ್ನೇಹ, ಶಬೀನ ಬಾನು, ಎನ್‌ಎಸ್‌ವಿಕೆ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಮಹಾಲಿಂಗಪ್ಪ, ಸಹ ಶಿಕ್ಷಕರಾದ ಗುರುಮೂರ್ತಿ, ಸುನೀಲ್, ಕುಮಾರ್, ರಾಜು, ಜ್ಯೋತಿ, ರೋಜಾ ಉಪಸ್ಥಿತರಿದ್ದರು.

## ಕುಂಬಳೂರಿನಲ್ಲಿ ಇಂದು ಶಾಲಾ ಕೊಠಡಿಗಳ ಉದ್ಘಾಟನೆ

ಮಲೇಬೆನ್ನೂರು ಸಮೀಪದ ಕುಂಬಳೂರು ಗ್ರಾಮದಲ್ಲಿ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಬಸವ ಗುರುಕುಲ ಶಾಲೆಗಳ ಆವರಣದಲ್ಲಿ ಈ ಶಾಲೆಯ ಹಳೆಯ ವಿದ್ಯಾರ್ಥಿ ಹಾಗೂ ಗುತ್ತಿಗೆದಾರ ವಿನಾಯಕ ನಗರ ಕ್ಯಾಂಪಿನ ಸಿ.ಹೆಚ್. ರವಿ ಅವರು ಕೊಡುಗೆಯಾಗಿ ನಿರ್ಮಿಸಿರುವ 4 ಕೊಠಡಿ ಮತ್ತು ಸಂಸದರ, ಶಾಸಕರ, ವಿಧಾನ ಪರಿಷತ್ ಸದಸ್ಯರ ಅನುದಾನದಲ್ಲಿ ನಿರ್ಮಿಸಿರುವ 4 ಕೊಠಡಿಗಳ ಉದ್ಘಾಟನಾ ಸಮಾರಂಭವನ್ನು ಇಂದು ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಸಾಣೇಹಳ್ಳಿ ಶಾಖಾ ಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಜರುಗುವ ಈ ಸಮಾರಂಭದ ಅಧ್ಯಕ್ಷತೆಯನ್ನು ಬಸವ ಗುರುಕುಲ ವಿದ್ಯಾಸಂಸ್ಥೆಯ ಉಪಾಧ್ಯಕ್ಷ ಕೆ. ತೀರ್ಥಪ್ಪ ವಹಿಸುವರು.

ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಬಿ.ಪಿ. ಹರೀಶ್, ಡಿ.ಜಿ. ಶಾಂತನಗೌಡ, ವಿಧಾನ ಪರಿಷತ್ ಸದಸ್ಯರಾದ ಕೆ.ಎಸ್. ನವೀನ್, ಮೋಹನಕುಮಾರ್ ಕೊಂಡಜ್ಜಿ, ರುದ್ರೇಗೌಡ್ರು, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಗುತ್ತಿಗೆದಾರ ಹಾಗೂ ದಾನಿ ಸಿ.ಹೆಚ್. ರವಿ, ಗ್ರಾ.ಪಂ. ಅಧ್ಯಕ್ಷೆ ಲೀಲಾ ಶಿವಕುಮಾರ್ ಮತ್ತು ಹರಿಹರದ ಶಕುಂತಲಮ್ಮ, ಡಿಡಿಪಿಐ ಜಿ.ಆರ್. ತಿಪ್ಪೇಶಪ್ಪ, ಬಿಇಓ ಹನುಮಂತಪ್ಪ ಸೇರಿದಂತೆ, ಇನ್ನೂ ಅನೇಕರು ಭಾಗವಹಿಸಲಿದ್ದಾರೆಂದು ಬಸವ ಗುರುಕುಲ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಹಳೇಮನಿ ಶಂಭುಲಿಂಗಪ್ಪ ತಿಳಿಸಿದ್ದಾರೆ.

## ಜನರಿಗೀಗ ಆಹಾರ ವಸ್ತುಗಳ ಬೆಲೆ ಏರಿಕೆ ಬಿಸಿ

### ಅಕ್ಕಿ, ಬೇಳೆಗಳ ಬೆಲೆ ಹೆಚ್ಚಳ, ಹಾಲಿನ ಬೆಲೆ ಏರಿಕೆಯ ಜೊತೆಗೆ, ಹೋಟೆಲ್ ತಿನಿಸು ದರಗಳೂ ಹೆಚ್ಚಾಗುವ ಸಾಧ್ಯತೆ

ದಾವಣಗೆರೆ, ಜೂ. 23 - ಒಂದೆಡೆ ವಾಣಿಜ್ಯೋದ್ಯಮ ಸಂಸ್ಥೆಗಳು ವಿದ್ಯುತ್ ಬೆಲೆ ಏರಿಕೆಯ ಹೊಡೆತಕ್ಕೆ ಸಿಲುಕಿದ್ದರೆ, ಮತ್ತೊಂದೆಡೆ ಜನ ಸಾಮಾನ್ಯರೂ ಸಹ ಬೆಲೆ ಏರಿಕೆಯ ಬಿಸಿ ಎದುರಿಸುವಂತಾಗಿದೆ.

ಕಳೆದ ವಾರದಲ್ಲೇ ಅಕ್ಕಿ ಬೆಲೆ ಮೂರ್ನಾಲ್ಕು ರೂ.ಗಳಷ್ಟು ಹೆಚ್ಚಾಗಿದೆ. ಸಕ್ಕರೆ ಬೆಲೆ ಕೆಜಿಗೆ 38 ರೂ.ಗಳಿಂದ 40 ರೂ.ಗಳಿಗೆ ತಲುಪಿದೆ. ತೊಗರಿ ಬೇಳೆ ಬೆಲೆ ತಿಂಗಳಲ್ಲೇ ಕೆಜಿಗೆ 115 ರೂ.ಗಳಿಂದ 150 ರೂ.ಗಳ ಗಡಿ ದಾಟುತ್ತಿದೆ.

ಕಳೆದ ಎರಡು ತಿಂಗಳಲ್ಲಿ ಇಳಿಮುಖವಾಗಿದ್ದ ಖಾದ್ಯ ತೈಲದ ಬೆಲೆ, ಒಂದೆರಡು ದಿನಗಳಿಂದ ಮತ್ತೆ ಬಿಸಿ ಮುಟ್ಟಿಸುತ್ತಿದೆ. ಕೈಗಾರಿಕೆಗಳಿಗೆ ಪೂರೈಸುವ ವಿದ್ಯುತ್ ಬೆಲೆ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಅಕ್ಕಿ ಬೆಲೆ ಹೆಚ್ಚಾಗಲಿದೆ ಎಂದು ರಾಜ್ಯ ಅಕ್ಕಿ ಗಿರಣಿಗಳ ಮಾಲೀಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಸ್. ಶಿವಕುಮಾರ್ ಹೇಳಿದ್ದಾರೆ.

ಕೂಲಿ ಕಾರ್ಮಿಕರ ಸಮಸ್ಯೆ, ಅಧಿಕ ವಿದ್ಯುತ್ ಶುಲ್ಕಗಳಿಂದ ರಾಜ್ಯದ ಬಹುತೇಕ ಅಕ್ಕಿಗಿರಣಿಗಳು ನಷ್ಟದಲ್ಲಿವೆ. ಈಗ ವಿದ್ಯುತ್ ಶುಲ್ಕ ಹೆಚ್ಚಳ ಮಾಡಿರುವುದರಿಂದ ಭತ್ತದ ಹಲ್ಲಿಂಗ್ ದರ ಹಾಗೂ ಅಕ್ಕಿಯ ದರ ಹೆಚ್ಚಿಸುವುದು ಅನಿವಾರ್ಯವಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಪರಣ್ಣ ಮುನವಳ್ಳಿ ತಿಳಿಸಿದ್ದಾರೆ.

ಅಕ್ಕಿ ಬೆಲೆ ಕೆಜಿಗೆ ಮೂರರಿಂದ 5 ರೂ.ಗಳವರೆಗೆ ಹೆಚ್ಚಾಗಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

ಚರ್ಮಗಂಟು ರೋಗದ ಹೊಡೆತದಿಂದಾಗಿ ಹೈನುಗಾರಿಕೆ ವಲಯ ತತ್ತರಿಸಿದೆ. ಇದರಿಂದಾಗಿ ಹಾಲಿನ ಉತ್ಪಾದನೆ ಮೇಲೆ ಪರಿಣಾಮವಾಗಿದೆ. ಸಹಜವಾಗಿಯೇ ಹಾಲಿನ ದರ ಹೆಚ್ಚಾಗುವ ಹಾದಿಯಲ್ಲಿದೆ.

ನಂದಿನಿ ಹಾಲಿನ ಬೆಲೆ 5 ರೂ. ಏರಿಕೆ ಮಾಡುವ ಬಗ್ಗೆ ಪರಿಶೀಲನೆ ನಡೆದಿದೆ ಎಂದು ಕೆ.ಎ.ಎಫ್. ಅಧ್ಯಕ್ಷ ಭೀಮಾ ನಾಯ್ಕ್ ಹೇಳಿದ್ದಾರೆ.

ವಿದ್ಯುತ್‌ನಿಂದ ಹಿಡಿದು ಅಕ್ಕಿ, ಬೇಳೆಯವರೆಗೆ ಬೆಲೆ ಹೆಚ್ಚಳವಾಗಿರುವುದು ಆಹಾರ ವಲಯದ ಮೇಲೆ ಪರಿಣಾಮ ಬೀರುತ್ತಿದೆ.

ಹೋಟೆಲ್‌ಗಳೂ ಸಹ ತಿಂಡಿ, ತಿನಿಸುಗಳ ಬೆಲೆ ಏರಿಕೆ ಮಾಡುವ ಸಾಧ್ಯತೆ ಇದೆ.

ಅಕ್ಕಿ, ತೊಗರಿ ಬೇಳೆ, ಸಕ್ಕರೆ ಸೇರಿದಂತೆ ಹಲವಾರು ಆಹಾರ ವಸ್ತುಗಳ ಬೆಲೆ ಏರಿಕೆಯಾಗಿದೆ. ಮುಂಬರುವ ದಿನಗಳಲ್ಲಿ ಬೆಲೆಗಳು ಇನ್ನಷ್ಟು ಏರಲಿವೆ ಎನ್ನಲಾಗುತ್ತಿದೆ ಎಂದು ಕಿರಾಣಿ ವರ್ತಕ ಕೃಷ್ಣಮೂರ್ತಿ ತಿಳಿಸಿದ್ದಾರೆ.

## ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿ ಸಾವು ವೈದ್ಯರ ನಿರ್ಲಕ್ಷ್ಯದ ಆರೋಪ : ಪ್ರತಿಭಟನೆ



ಮೃತ ಆಸೀಫ್

ದಾವಣಗೆರೆ, ಜು. 23- ಗುರುವಾರ ಸಂಜೆ ನಡೆದಿದ್ದ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡ ವ್ಯಕ್ತಿಗೆ ಚಿಗಟೇರಿ ಜಿಲ್ಲಾಸ್ಪತ್ರೆ ವೈದ್ಯರು ಸೂಕ್ತ ಚಿಕಿತ್ಸೆ ನೀಡದೆ ನಿರ್ಲಕ್ಷ್ಯ ವಹಿಸಿ ಸಾವಿಗೆ ಕಾರಣರಾಗಿದ್ದಾರೆ ಎಂದು ಆರೋಪಿಸಿ, ಮೃತ ವ್ಯಕ್ತಿಯ ಸಂಬಂಧಿಕರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಮುಖಂಡರು ಶಿವಾಲಿ ಚಿತ್ರಮಂದಿರದ ಬಳಿ ಪ್ರತಿಭಟನೆ ನಡೆಸಿದ ಘಟನೆ ಶುಕ್ರವಾರ ಬೆಳಿಗ್ಗೆ ನಡೆದಿದೆ.

ಆಟೋದಲ್ಲಿ ಈರುಳ್ಳಿ ವ್ಯಾಪಾರ ಮಾಡುತ್ತಿದ್ದ ಜಾಲಿನಗರ ವಾಸಿ ಆಸೀಫ್ (34) ಗುರುವಾರ ಸಂಜೆ ಹರಿಹರದಿಂದ ದಾವಣಗೆರೆಗೆ ಹಿಂತಿರುಗುತ್ತಿದ್ದ ವೇಳೆ ಅಮರಾವತಿ ಬಳಿ ಕಾರೊಂದು ಸಮೀಪ ಬಂದು ಆಟೋ ಪಲ್ಟಿಯಾಗಿ ತೀವ್ರವಾಗಿ ಗಾಯಗೊಂಡಿದ್ದರು.

ಅವರನ್ನು ತುರ್ತು ಚಿಕಿತ್ಸೆಗಾಗಿ ಚಿಗಟೇರಿ ಜಿಲ್ಲಾಸ್ಪತ್ರೆಗೆ ಆಂಬ್ಯುಲೆನ್ಸ್ ಮೂಲಕ ಕರೆತರಲಾಗಿತ್ತು. ಈ ವೇಳೆ ತುರ್ತು ಚಿಕಿತ್ಸೆ ನೀಡದೆ ಅಲ್ಲಿನ ವೈದ್ಯರು ಹಾಗೂ ಸಿಬ್ಬಂದಿಗಳು ಅನಗತ್ಯ ಕಾಲಾಹರಣ ಮಾಡಿ ನಿರ್ಲಕ್ಷ್ಯ ವಹಿಸಿದ್ದರಿಂದ ಆಸೀಫ್ ಮೃತಪಟ್ಟಿದ್ದಾರೆ ಎಂದು ಸಂಬಂಧಿಕರು ಆರೋಪಿಸಿದ್ದಾರೆ.

ಗಾಯಗೊಂಡಿದ್ದ ಆಸೀಫ್‌ಗೆ ಉಸಿರಾಟದ ತೊಂದರೆ ಇದೆ. ಕೂಡಲೇ ಆಕ್ಸಿಜನ್ ನೀಡಿ ಎಂದು ಸಂಬಂಧಿಕರೊಬ್ಬರು ಹೇಳಿದಾಗ ಅಲ್ಲಿದ್ದ ಸಿಬ್ಬಂದಿಗಳು ಸ್ಪಂದಿಸದೇ ಗೂಂಡಾ ವರ್ತನೆ ತೋರಿದ್ದಾರೆ ಎಂದು ತಂಜೀಮುಲ್ ಮುಸ್ಲಿಮಿನ್ ಫಂಡ್ ಅಸೋಸಿಯೇಷನ್ ಮಾಜಿ ಕಾರ್ಯದರ್ಶಿ ಸೈಯದ್ ರಿಯಾಜ್ ತಿಳಿಸಿದ್ದಾರೆ.

ಮೃತರ ಕುಟುಂಬಕ್ಕೆ ಪರಿಹಾರ ನೀಡುವಂತೆ ಆಗ್ರಹಿಸಿ ಶಿವಾಲಿ ಚಿತ್ರಮಂದಿರದ ಬಳಿ ಪ್ರತಿಭಟನೆ ನಡೆಸಿದ್ದಾರೆ. ಡಿಹೆಚ್‌ಓ ನಾಗರಾಜ್ ಸ್ಥಳಕ್ಕೆ ಭೇಟಿ ನೀಡಿದ್ದಾರೆ

ಈ ವೇಳೆ ಮಾತನಾಡಿದ ಅವರು, ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ತಂಡ ರಚಿಸಿ, ನಿರ್ಲಕ್ಷಿತರ ಮೇಲೆ ಶಿಸ್ತು ಕ್ರಮ ಜರುಗಿಸುವುದಾಗಿ ಭರವಸೆ ನೀಡಿದ್ದಾರೆ.

ಮೃತ ಕುಟುಂಬಕ್ಕೆ ಪರಿಹಾರ ನೀಡಲು ತಮಗೆ ಅಧಿಕಾರವಿಲ್ಲ. ಈ ಕುರಿತು ಜಿಲ್ಲಾ ವರಿಷ್ಠಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಲು ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ. ವೈದ್ಯರ ನಿರ್ಲಕ್ಷತೆ ಕುರಿತು ಬಡಾವಣೆ ಪೊಲೀಸ್ ಠಾಣೆಯಲ್ಲಿ ಮೃತರ ಸಂಬಂಧಿಗಳು ದೂರು ದಾಖಲಿಸಿದ್ದಾರೆ. ಪ್ರತಿಭಟನೆಯಲ್ಲಿ ಸೈಯದ್ ರಿಯಾಜ್, ಜಾಫರ್, ಆರೀಫ್, ಸುಹೇಲ್ ಇತರರು ಇದ್ದರು.



## ರಾಜ್ಯದಲ್ಲಿ ಟೆಸ್ಲಾ ಘಟಕ ಸ್ಥಾಪಿಸಲಿ ಸಚಿವ ಎಂ.ಬಿ. ಪಾಟೀಲ್ ಆಹ್ವಾನ

ಬೆಂಗಳೂರು, ಜೂ. 23 - ಎಲೆಕ್ಟ್ರಿಕ್ ಕಾರುಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಅಮೆರಿಕದ ಟೆಸ್ಲಾ ಕಂಪನಿಯು ರಾಜ್ಯದಲ್ಲಿ ಉತ್ಪಾದನಾ ಘಟಕ ಸ್ಥಾಪಿಸುವ ಬಗ್ಗೆ ಪರಿಗಣಿಸಬೇಕು. ಕಂಪನಿ ಘಟಕ ಸ್ಥಾಪಿಸಲು ನಿರ್ಧರಿಸಿದರೆ, ಸರ್ಕಾರ ಎಲ್ಲಾ ರೀತಿಯ ಸಹಕಾರ ನೀಡಲಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಹೇಳಿದ್ದಾರೆ.

ಟೆಸ್ಲಾ ಕಂಪನಿಯು ತನ್ನ ಉದ್ಯಮವನ್ನು ಭಾರತದಲ್ಲಿ ವಿಸ್ತರಿಸಲು ಇಷ್ಟಪಡುವುದಾದರೆ, ಕರ್ನಾಟಕ ರಾಜ್ಯವು ಅದಕ್ಕೆ ಪ್ರಶಸ್ತ ತಾಣವಾಗಿದೆ ಎಂದು ಅವರು ಟ್ವೀಟ್ ಮಾಡಿದ್ದಾರೆ. ಈ ಕಂಪನಿಯು ಎಲೆಕ್ಟ್ರಿಕ್ ಕಾರುಗಳ ಜೊತೆಗೆ ಸೌರ ಫಲಕಗಳು ಮತ್ತಿತರೆ ಪರ್ಯಾಯ ಇಂಧನ ಉತ್ಪನ್ನಗಳನ್ನು ತಯಾರಿಸುತ್ತದೆ. ಅಲ್ಲದೇ, ಸ್ಪೇಸ್-ಎಕ್ಸ್ ಕಂಪನಿ ಮೂಲಕ ಉಪಗ್ರಹ ಅಂತರ್ಜಾಲ ಸೇವೆ ಒದಗಿಸುತ್ತಿದೆ. ಈ ಕಂಪನಿಗಳನ್ನು ಮುನ್ನಡೆಸುತ್ತಿರುವ ಉದ್ಯಮಿ ಎಲಾನ್ ಮಸ್ಕ್ ಅವರು ಕರ್ನಾಟಕದಲ್ಲಿ ಯಾವುದೇ ಉದ್ಯಮ ಸ್ಥಾಪಿಸುವುದಾದರೆ ಸಹಕಾರ ಕೊಡಲಾಗುವುದು ಎಂದವರು ತಿಳಿಸಿದರು. ಭಾರತದಲ್ಲಿ ಗಣನೀಯ ಹೂಡಿಕೆ ಮಾಡಲು ಬಯಸುವುದಾಗಿ ಟೆಸ್ಲಾ ಕಂಪನಿ ತಿಳಿಸಿತ್ತು.

ಪ್ರಧಾನಿ ನರೇಂದ್ರ ಮೋದಿ ಭೇಟಿ ಮಾಡಿದ ನಂತರ ಮಾತನಾಡಿದ್ದ ಟೆಸ್ಲಾ ಕಂಪನಿ ಮುಖ್ಯಸ್ಥ ಮಸ್ಕ್, ವಿಶ್ವದಾದ್ಯಂತ ಇರುವ ದೊಡ್ಡ ದೇಶಗಳ ಪೈಕಿ ಭಾರತದ ಮೇಲೆ ಹೆಚ್ಚು ಭರವಸೆ ಇದೆ ಎಂದಿದ್ದರು. 2024ರಲ್ಲಿ ಭಾರತಕ್ಕೆ ಭೇಟಿ ನೀಡುವ ಯೋಜನೆ ಇದೆ ಎಂದೂ ಅವರು ತಿಳಿಸಿದ್ದರು.

# ದೇಶದ ಪ್ರಗತಿಗೆ ಸಾಮಾಜಿಕ ಹೊಣೆಗಾರಿಕೆ ಪೂರಕ

## ವಾಣಿಜ್ಯಶಾಸ್ತ್ರ ವಿಭಾಗದ ಹಳೆಯ ವಿದ್ಯಾರ್ಥಿಗಳ ವೇದಿಕೆಗೆ ಚಾಲನೆ ನೀಡಿದ ಎಸ್.ಆರ್. ಅಂಜಿನಪ್ಪ



ದಾವಣಗೆರೆ, ಜೂ. 23- ದೇಶದ ಪ್ರಗತಿಗೆ ಸಾಮಾಜಿಕ ಹೊಣೆಗಾರಿಕೆ ಪೂರಕವಾಗಿದ್ದು, ಅಭಿವೃದ್ಧಿ ಕೆಲಸಗಳಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಎಸ್.ಆರ್. ಅಂಜಿನಪ್ಪ ಹೇಳಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂದು ಏರ್ಪಾಡಾಗಿದ್ದ ವಾಣಿಜ್ಯಶಾಸ್ತ್ರ ವಿಭಾಗದ ಹಳೆಯ ವಿದ್ಯಾರ್ಥಿಗಳ ವೇದಿಕೆಗೆ ಸಸಿಗೆ ನೀರೆರೆಯುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರತಿಯೊಬ್ಬ ವ್ಯಕ್ತಿಯೂ ಸಹ ಸಾಮಾಜಿಕ ಹೊಣೆಗಾರಿಕೆ ಅರಿಯದ ಹೊರತು, ದೇಶದ ಆಗುಹೋಗುಗಳ ಕುರಿತು ಮಾತನಾಡುವ ಹಕ್ಕನ್ನು ಹೊಂದಿರಲಾರ ಎಂದರು. ಪ್ರಸ್ತುತ ದಿನಮಾನಗಳಲ್ಲಿ ಸಾಮಾಜಿಕ ಹೊಣೆಗಾರಿಕೆ ಇಲ್ಲವಾಗಿದೆ. ದೇಶದ ಬಗ್ಗೆ ಮಾತನಾಡುವಾಗ ನಾವು ಮಾಡುವ ಕಾರ್ಯ ಏನು ಎಂಬುದರ ಬಗ್ಗೆ ಚಿಂತನೆ ಮಾಡುವುದೇ ಇಲ್ಲ. ಕೇವಲ ಇನ್ನೊಬ್ಬರ ಕುರಿತು ಮಾತನಾಡುವವರೇ ಹೆಚ್ಚಾಗಿದ್ದಾರೆಂದು ತಿಳಿಸಿದರು.

ನಮ್ಮ ಕಾಲೇಜಿನಲ್ಲಿ ಓದಿದ ಹಳೆಯ ವಿದ್ಯಾರ್ಥಿಗಳು ಕಾಲೇಜಿಗೆ ಕೊಡುಗೆ ಕೊಡುವ ಸಲುವಾಗಿ ವಾಣಿಜ್ಯಶಾಸ್ತ್ರ ವಿಭಾಗದ ಹಳೆಯ ವಿದ್ಯಾರ್ಥಿಗಳ ವೇದಿಕೆ ರಚಿಸಿ, ತನ್ಮೂಲಕ ಕಾಲೇಜಿನ ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಪೂರಕವಾದ ವಿವಿಧ ಕಾರ್ಯ ಯೋಜನೆಗಳನ್ನು ರೂಪಿಸಲು ಮುಂದಾಗಿರುವುದು ಹೆಮ್ಮೆಯ ವಿಚಾರ ಎಂದರು. ಹಳೆಯ ವಿದ್ಯಾರ್ಥಿಗಳು ತಮ್ಮ ಸ್ವಂತ ಜೇಬಿನಿಂದ 98 ಸಾವಿರ ರೂ. ಠೇವಣಿ ಸಂಗ್ರಹಿಸಿ, ಕಾಲೇಜಿನ ವಿದ್ಯಾರ್ಥಿಗಳ ಶೈಕ್ಷಣಿಕ ಸಹಾಯಕ್ಕೆ ಮುಂದಾಗಿರುವುದು ನಿಜಕ್ಕೂ ಶ್ಲಾಘನೀಯ ಕಾರ್ಯ ಎಂದು ಹೇಳಿದರು.

ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಬಸವರಾಜ ಸಿ. ತಹಶೀಲ್ದಾರ್ ಮಾತನಾಡಿ, ಇಡೀ ರಾಜ್ಯದಲ್ಲೇ ಅತಿ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ಹೆಗ್ಗಳಿಕೆಗೆ ಪಾತ್ರವಾಗಿದೆ. ಬಳ್ಳಾರಿಯ ಸರಳಾದೇವಿ ಕಾಲೇಜು ಈವರೆಗೂ ನಂ.1 ಆಗಿತ್ತು. ಈ ವರ್ಷ ಅದನ್ನು ಹಿಂದಿಕ್ಕಿ ಮುಂದೆ ಹೆಜ್ಜೆಯನ್ನಿಟ್ಟಿದ್ದೇವೆ ಎಂದು ಹೇಳಿದರು.

ಕಾಲೇಜಿನ ಹಳೆಯ ವಿದ್ಯಾರ್ಥಿ, ಪತ್ರಕರ್ತ ವೀರನಗೌಡ ಪಾಟೀಲ್ ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮ ಉದ್ಧಾರ ನಮ್ಮ ಕೈಯ್ಯಲ್ಲಿದೆ. ದೇಶ ಉದ್ಧಾರವಾಗಬೇಕಾದರೆ, ನಾವೆಲ್ಲಾ ನಮ್ಮ ವೈಯಕ್ತಿಕ ಹಿತಾಸಕ್ತಿಗಳ ಜೊತೆಗೆ ಸಾಮಾಜಿಕ ಹೊಣೆಗಾರಿಕೆಯನ್ನು ಮರೆಯಬೇಕು ಎಂದರು.

ಹಳೆಯ ವಿದ್ಯಾರ್ಥಿ, ಕೈಗಾರಿಕೋದ್ಯಮಿ ಕೆ.ಬಿ. ಅನಿಲ್ ಕುಮಾರ್ ವಿಶೇಷ ಉಪನ್ಯಾಸ ನೀಡಿದರು. ಮತ್ತೊಬ್ಬ ಹಳೆಯ ವಿದ್ಯಾರ್ಥಿ ಖಲೀಲ್ ಅನಿಸಿಕೆ ಹಂಚಿಕೊಂಡರು.

ಚಾರ್ಟರ್ಡ್ ಅಕೌಂಟೆಂಟ್ ಕಿರಣ್ ಆರ್. ಶೆಟ್ಟಿ, ಶ್ರೀಶೈಲ ಮತ್ತಿತರರು ಉಪಸ್ಥಿತರಿದ್ದರು.

# ಮಾತು ಬಲ್ಲವನಿಗೆ ಜಗಳವಿಲ್ಲ, ಯೋಗ ಬಲ್ಲವರಿಗೆ ರೋಗವಿಲ್ಲ

## ಕುರ್ಕಿ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಕೆ.ಜಿ. ರೇವಣಸಿದ್ದಪ್ಪ ಗೌಡ್ರು ಕುರ್ಕಿ



ದಾವಣಗೆರೆ, ಜೂ 23- ಯೋಗ ಭಾರತೀಯ ಪರಂಪರೆಯ ಮೂಲ ಸತ್ವ. ಯೋಗದಿಂದ ಆರೋಗ್ಯ, ನೆಮ್ಮದಿ, ಶಾಂತಿ ಹಾಗೂ ಸಾಮಾಜಿಕ ಸ್ವಾಸ್ಥ್ಯ ಕಾಪಾಡಬಹುದಾಗಿದೆ. ಮಾತು ಬಲ್ಲವರಿಗೆ ಜಗಳವಿಲ್ಲ ಯೋಗ ಬಲ್ಲವರಿಗೆ ರೋಗವಿಲ್ಲ. ಹಾಗಾಗಿ ಎಲ್ಲರೂ ದಿನನಿತ್ಯ ಯೋಗ ಮಾಡಿ ಎಂದು ಕುರ್ಕಿ ಕೆ.ಜಿ. ರೇವಣಸಿದ್ದಪ್ಪ ಗೌಡ್ರು ವಿದ್ಯಾರ್ಥಿಗಳಿಗೆ ಕರೆಕೊಟ್ಟರು.

ಇಲ್ಲಿಗೆ ಸಮೀಪದ ಕುರ್ಕಿ ಸರ್ಕಾರಿ ಪ್ರೌಢಶಾಲೆ ಯಲ್ಲಿ ಇಂದು ಏರ್ಪಡಿಸಿದ್ದ 9 ನೇ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಯೋಗದಿಂದ ನಿಮ್ಮ ಆರೋಗ್ಯ ಉತ್ತಮವಾಗುತ್ತದೆ. ಹಾಗೂ ವಿದ್ಯಾರ್ಥಿಗಳಿಗೆ ಓದಿನಲ್ಲಿ ಏಕಾಗ್ರತೆ ಮೂಡುತ್ತದೆ ಆದ್ದರಿಂದ ಪ್ರತಿಯೊಬ್ಬರು ಪ್ರತಿ ದಿನ ಅರ್ಧ ಗಂಟೆಯಾದರೂ ಯೋಗ ಮಾಡಿ ಎಂದು ವಿದ್ಯಾರ್ಥಿಗಳಿಗೆ ರೇವಣಸಿದ್ದಪ್ಪ ಗೌಡ್ರು ಕಿವಿ ಮಾತು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕೆ.ಜಿ. ವೇದಮೂರ್ತಿಗೌಡ್ರು ಮಾತನಾಡಿ, ಇಂದು ವಿಶ್ವಸಂಸ್ಥೆಯ ವೇದಿಕೆಯಲ್ಲಿ 9 ನೇ ವಿಶ್ವ ಯೋಗ ದಿನಾಚರಣೆಯಲ್ಲಿ ಭಾರತದ ಪ್ರಧಾನಮಂತ್ರಿಯವರು ಭಾಗವಹಿಸಲಿದ್ದಾರೆ. ವಿಶ್ವದ 180 ರಾಷ್ಟ್ರಗಳ ಗಣ್ಯರು ಇದಕ್ಕೆ ಸಾಥ್ ನೀಡಲಿದ್ದಾರೆ. ಯೋಗ ಇಂದು ಜಾಗತಿಕ ಮನ್ನಣೆಯನ್ನು ಗಳಿಸಿಕೊಂಡಿದೆ ಎಂದು ತಿಳಿಸಿದರು.

ಅಧ್ಯಾಪಕ ಸಿ.ಜಿ. ಜಗದೀಶ್ ಕೂಲಂಬಿಯವರು ಪ್ರಾಸ್ತಾವಿಕ ನುಡಿಗಳಲ್ಲಿ ಇಂದು 9 ನೌಕಾ ಪಡೆ ಹಡಗುಗಳಲ್ಲಿ 'ಓಷ್ಯನ್ ರಿಂಗ್ ಆಫ್ ಯೋಗ'ವನ್ನು ಹಾಗೂ 2 ಧ್ರುವ (ಉತ್ತರ ಮತ್ತು ದಕ್ಷಿಣ) ಗಳಲ್ಲೂ ಯೋಗ ದಿನ ಆಚರಿಸ ಲಾಗುತ್ತಿದೆ. ಈ ವರ್ಷ 'ವಸುದೈವ ಕುಟುಂಬಕಂ' ಎಂಬ ಘೋಷ ವಾಕ್ಯದಡಿ ಯೋಗ ದಿನಾಚರಣೆ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮುಖ್ಯ ಶಿಕ್ಷಕ ಆರ್. ಗಣೇಶಾಚಾರಿ ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ಯೋಗದಿಂದ ದೈಹಿಕ ಮತ್ತು ಮಾನಸಿಕ ನಿಯಂತ್ರಣ ಸಾಧ್ಯ. ಆರೋಗ್ಯವೇ ಭಾಗ್ಯ ಎನ್ನುವುದು ಈ ಯೋಗದಲ್ಲಿ ಅಡಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗ್ರಾ.ಪಂ. ಅಧ್ಯಕ್ಷ ಬಿ.ಜಿ. ನಂದ್ಯಪ್ಪ, ಸದಸ್ಯರಾದ ಬಸಣ್ಣ, ಕೆ.ವಿ. ಓಂಕಾರಪ್ಪ, ಕೆ.ಜೆ. ನಾಗರಾಜ್, ಶಿಕ್ಷಕ ಸಿ.ಜಿ. ಜಗದೀಶ್ ಕೂಲಂಬಿ, ಶ್ರೀಮತಿ ಎಸ್. ಶಾಂತಕುಮಾರಿ, ಎಂ.ವಿ. ಶಕುಂತಲಾ, ಪಾರ್ವತಮ್ಮ, ಪ್ರಕಾಶ್, ಎಂ.ಆರ್. ರಾಘವೇಂದ್ರ, ವಿರೂಪಾಕ್ಷಿ, ನಾಗರಾಜ್ ಉಪಸ್ಥಿತರಿದ್ದರು.

ದೈಹಿಕ ಶಿಕ್ಷಕ ರಾಘವೇಂದ್ರ, ಸೂರ್ಯ ನಮಸ್ಕಾರ, ತಾಡಾಸನ, ವೃಕ್ಷಾಸನ, ಪಾದ ಹಸ್ತಾಸನ, ವಜ್ರಾಸನ, ಭುಜಂಗಾಸನ ಮತ್ತಿತರೆ ಯೋಗಾಸನಗಳನ್ನು ಮಕ್ಕಳಿಂದ ಮಾಡಿಸಿದರು.

ಎಂ.ಎನ್. ನಾಗರಾಜ್ ಯೋಗ ಪ್ರಾರ್ಥನೆ ನೆರವೇರಿಸಿದರು. ಎ.ಆರ್. ರಾಘವೇಂದ್ರ, ಸ್ವಾಗತಿಸಿ, ನಿರೂಪಿಸಿದರು. ಸಿ.ಜಿ. ಜಗದೀಶ್ ಕೂಲಂಬಿ ವಂದಿಸಿದರು.

# 5 ಕೋಟಿ ಸಸಿಗಳನ್ನು ನೆಡಲು ಕ್ರಮ

## ಸಸಿಗಳ ಮೇಲೆ ನಿಗಾ ವಹಿಸಲು ಜಿಯೋ ಟ್ಯಾಗ್ : ಖಂಡ್ರೆ



ಬೆಂಗಳೂರು, ಜೂ. 23 - ಪ್ರಸಕ್ತ ವರ್ಷ 5 ಕೋಟಿ ಸಸಿಗಳನ್ನು ರಾಜ್ಯಾದ್ಯಂತ ನೆಟ್ಟು, ಅವು ಮರವಾಗಿ ಬೆಳೆಯುವಂತೆ ಕಾಳಜಿ ವಹಿಸುವುದರ ಜೊತೆಗೆ ಎಷ್ಟು ಸಸಿಗಳು ಉಳಿದಿವೆ ಎಂಬ ಬಗ್ಗೆ ಜಿಯೋ ಟ್ಯಾಗ್ ಮೂಲಕ ಆಡಿಟ್ ಮಾಡಿಸಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಸ್ಪಷ್ಟಪಡಿಸಿದ್ದಾರೆ.

ವಿಕಾಸಸೌಧದಲ್ಲಿಂದು ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯ್ತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಿದ ಸಚಿವರು, ಅರಣ್ಯ ವ್ಯಾಪ್ತಿ, ಹಸಿರು ವ್ಯಾಪ್ತಿ ಹೆಚ್ಚಿಸುವುದು ಸರ್ಕಾರದ ಗುರಿಯಾಗಿದೆ. ಒಟ್ಟಾರೆ ಭೌಗೋಳಿಕ ಪ್ರದೇಶದ ಪೈಕಿ ಅರಣ್ಯ ಹಾಗೂ ಹಸಿರು ವ್ಯಾಪ್ತಿ ಕನಿಷ್ಠ ಶೇ.33ಕ್ಕೆ ಇರಬೇಕು ಎಂಬುದು ಮಾನದಂಡ. ಆದರೆ ಪ್ರಸ್ತುತ ರಾಜ್ಯದಲ್ಲಿ ಈ ವ್ಯಾಪ್ತಿ ಸುಮಾರು 20.19ರಷ್ಟು ಮಾತ್ರವೇ ಇದ್ದು, ಸರ್ಕಾರ ವ್ಯಾಪ್ತಿ ಹೆಚ್ಚಳವನ್ನು ಆದ್ಯ ಕರ್ತವ್ಯ ಎಂದು ಪರಿಗಣಿಸಿದೆ ಎಂದರು.

ನಾವು ಪ್ರಕೃತಿ ಪರಿಸರ ರಕ್ಷಿಸಿದರೆ ಪ್ರಕೃತಿ ನಮ್ಮನ್ನು ರಕ್ಷಿಸುತ್ತದೆ. ಅರಣ್ಯ ಇಲಾಖೆ ಮುಖ್ಯವಾಗಿ ಅರಣ್ಯ ಸಂರಕ್ಷಿಸಬೇಕು. ಆ ಕಾರ್ಯವನ್ನು ಇಲಾಖೆ ಮಾಡುತ್ತದೆ. ಮಕ್ಕಳಲ್ಲಿ ಪರಿಸರ ಕಾಳಜಿ ಮೂಡಿಸಲು ಯೋಜನೆ ರೂಪಿಸಿದ್ದು, ಶಿಕ್ಷಣ ಇಲಾಖೆಯೂ ಸೇರಿದಂತೆ ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳ ಸಹಯೋಗದಲ್ಲಿ ಪ್ರಸಕ್ತ ವರ್ಷ 5 ಕೋಟಿ ಸಸಿ ನೆಟ್ಟು, ಪೋಷಿಸುವ ಮೂಲಕ ಯೋಜನೆಯನ್ನು ಯಶಸ್ವಿಗೊಳಿಸಲಾಗುವುದು ಎಂದರು.

ಜುಲೈ 1ರಿಂದ 7 ದಿನಗಳ ಕಾಲ ಆಚರಿಸಲಾಗುತ್ತಿರುವ ವನಮಹೋತ್ಸವಕ್ಕಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯಲ್ಲಿ ಪೊಲೀಸ್ ವರಿಷ್ಠಾಧಿಕಾರಿಗಳು, ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳೂ ಇದ್ದು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸದಸ್ಯ ಕಾರ್ಯದರ್ಶಿ ಆಗಿರುತ್ತಾರೆ. ಜಿಲ್ಲೆಯ ಇತರೆ ಎಲ್ಲ ಇಲಾಖೆಗಳ ಸಹಯೋಗದೊಂದಿಗೆ ಈ ಕಾರ್ಯಕ್ರಮ ರೂಪಿಸಲಾಗಿದೆ.

ಹಸಿರು ವ್ಯಾಪ್ತಿ ಹೆಚ್ಚಳ ಕೇವಲ ಅರಣ್ಯ ಇಲಾಖೆ ಒಂದರಿಂದ ಆಗುವ ಕಾರ್ಯವಲ್ಲ. ಇದರಲ್ಲಿ ಇಡೀ ಸಮಾಜ ಪಾಲ್ಗೊಳ್ಳಬೇಕು. ಪ್ರತಿಯೊಬ್ಬರೂ ಸಸಿ ನೆಟ್ಟು ಬೆಳೆಸುವುದು ತಮ್ಮ ಕರ್ತವ್ಯ ಎಂದು ತಿಳಿಯಬೇಕು. ಆಬಾಲವೃದ್ಧರಾದಿಯಾಗಿ ಎಲ್ಲರೂ ಕೈಜೋಡಿಸಿದರೆ ಇದು ಜನಾಂದೋಲನವಾಗುತ್ತದೆ ಎಂದರು.

ತಾವು ಅಧಿಕಾರ ವಹಿಸಿಕೊಳ್ಳುವ ಮೊದಲೇ ರೈತರಿಗೆ ಪೂರೈಕೆ ಮಾಡುತ್ತಿದ್ದ ಸಸಿಗಳ ದರವನ್ನು ಹೆಚ್ಚಳ ಮಾಡಲಾಗಿತ್ತು. ಈ ಬಗ್ಗೆ ಪುನರ್ ಪರಿಶೀಲನೆ ಮಾಡಿ, 5x8 ಗಿಡಗಳಿಗೆ 2 ರೂ., 6x8 ಗಿಡಗಳಿಗೆ 3 ರೂ. ಮತ್ತು 8x12 ಗಿಡಗಳಿಗೆ 6 ರೂ. ನಿಗದಿ ಮಾಡಲಾಗಿದೆ ಎಂದು ವಿವರಿಸಿದರು.

ಮಹಾತ್ಮಾ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲೂ ಗ್ರಾಮೀಣ ಪ್ರದೇಶದಲ್ಲಿ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಅದೇ ರೀತಿ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸ್ಥಳೀಯ ನಗರ ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯಕ್ರಮ ರೂಪಿಸಲಾಗುವುದು ಎಂದರು.

ಯಾವುದೇ ಕಾರಣಕ್ಕೂ ವನಮಹೋತ್ಸವವನ್ನು ಒಣ ಮಹೋತ್ಸವ ಆಗಲು ಬಿಡುವುದಿಲ್ಲ. ನೆಟ್ಟ ಸಸಿಗಳು ಜೀವಂತ ಉಳಿಯಬೇಕು, ಬೆಳೆಯಬೇಕು. ಇದಕ್ಕಾಗಿ ಜಿಯೋ ಟ್ಯಾಗ್ ಮೂಲಕ ಆಡಿಟ್ ಮಾಡಿಸಲಾಗುವುದು, ಅಗತ್ಯ ಬಿದ್ದರೆ ಮೂರನೆ ವ್ಯಕ್ತಿ ಆಡಿಟ್ ಕೂಡ ಮಾಡಿಸಲಾಗುವುದು. ಈ ಬಾರಿ ನೆಟ್ಟ ಗಿಡಗಳ ಪೈಕಿ ಕನಿಷ್ಠ ಶೇ.80ರಷ್ಟು ಜೀವಂತ ಉಳಿಸಿ, ಬೆಳೆಸುವುದು ನಮ್ಮ ಉದ್ದೇಶವಾಗಿದೆ ಎಂದರು.

# ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಸ್ವೀಕಾರ ಸಮಾರಂಭ



ದಾವಣಗೆರೆ, ಜೂ. 23- ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದ ವಿದ್ಯಾರ್ಥಿ ಸಂಘದ ಪ್ರತಿಜ್ಞಾ ವಿಧಿ ಸ್ವೀಕಾರ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಗರದ ಅಪರಾಧ ದಾಖಲೆ ವಿಭಾಗದ ಜಿಲ್ಲಾ ಪೊಲೀಸ್ ಅಧೀಕ್ಷಕ ಬಿ.ಎಸ್. ಬಸವರಾಜ್ ಚುನಾಯಿತಾ ಅಭ್ಯರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿ ಮಾತನಾಡಿದರು.

ಶಾಲೆಯ ಕಾರ್ಯದರ್ಶಿಗಳಾದ ಜಯಣ್ಣ, ಪ್ರಸ್ತುತ ಸಾಲಿನ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷರಾಗಿ ಚುನಾಯಿತರಾದ ಹತ್ತನೇ ತರಗತಿಯ ಕು.ಬಿಂದು ಎಂ. ಆರ್. ಮಾತನಾಡಿದರು.

ಶಾಲಾ ಚುನಾವಣೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಂಜುನಾಥ್ ಶ್ಯಾಮನೂರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಸ್ಥೆಯ ಸಂಚಾಲಕ ಶಂಭುಲಿಂಗಪ್ಪ, ಸದಸ್ಯರಾದ ಶ್ರೀಮತಿ ಭಾರತಿ ಹೆಗಡೆ, ಶಾಲಾ ಪೋಷಕರಾದ ಶ್ರೀಮತಿ ಅನಿತಾ ದರ್ಶನ್ ,ಪ್ರಾಂಶುಪಾಲ ಮಂಜುನಾಥ, ಶೈಕ್ಷಣಿಕ ಸಂಯೋಜಕ ಶಿವರಾಜ್, ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪಿ.ಎನ್. ಚಿನ್ಮಯಿ ತಂಡದವರು ಭರತ ನಾಟ್ಯ ಕಾರ್ಯಕ್ರಮ ನಡೆಸಿಕೊಟ್ಟರು. ಶ್ರೀಮತಿ ಕೆ.ವಿ. ಮಂಜುಳಾ ಕಾರ್ಯಕ್ರಮ ನಿರೂಪಿಸಿದರು. ಡಿ.ಪಿ. ಖುಷಿ ಪ್ರಾರ್ಥಿಸಿದರು. ಶ್ರೀಮತಿ ಎಸ್. ಶ್ವೇತ ಸ್ವಾಗತಿಸಿದರು. ಸುನಿಲ್‌ಕುಮಾರ್ ವಂದಿಸಿದರು.

# ಮಾಗನೂರು ಬಸಪ್ಪ ಪಬ್ಲಿಕ್ ಶಾಲೆಯಲ್ಲಿ ಯೋಗ ದಿನ



ದಾವಣಗೆರೆ, ಜೂ. 23- ಮಾಗನೂರು ಬಸಪ್ಪ ಪಬ್ಲಿಕ್ ಶಾಲೆಯಲ್ಲಿ ಯೋಗ ದಿನಾಚರಣೆ ಕಾರ್ಯಕ್ರಮ ನಡೆಯಿತು. ಶಾಲೆಯ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರ ಗೌಡ, ಪ್ರಾಂಶುಪಾಲರಾದ ಎ.ಎಸ್. ಕುಸುಮಾ ಹಾಗೂ ಅತಿಥಿ ಎಸ್.ಆರ್. ಶಿರಗಂಬಿ, ಎಸ್. ಮಂಜುನಾಥ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದು ಮಾತನಾಡಿದರು.

# ವಿದ್ಯಾರ್ಥಿ ವೇತನ, ಹಾಸ್ಟೆಲ್ ಸೌಲಭ್ಯಕ್ಕೆ ಎಐಡಿಎಸ್‌ಓ ಆಗ್ರಹ

ದಾವಣಗೆರೆ, ಜೂ. 23 - ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಬಸ್ ಪಾಸ್, ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಬಲಪಡಿಸುವುದು, ಪಠ್ಯಕ್ರಮದ ಮೂಲಕ ಶಿಕ್ಷಣ ಸಂಸ್ಥೆಗಳಲ್ಲಿ ಧರ್ಮನಿರಪೇಕ್ಷ ವಾತಾವರಣವನ್ನು ರಕ್ಷಿಸಿ, ವಿದ್ಯಾರ್ಥಿ ವೇತನ ಮತ್ತು ಹಾಸ್ಟೆಲ್ ಸೌಲಭ್ಯಗಳನ್ನು ಖಾತ್ರಿ ಪಡಿಸುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟುಡೆಂಟ್ ಆರ್ಗನೈಜೇಶನ್ (ಎಐಡಿಎಸ್‌ಓ) ರಾಜ್ಯ ಸಮಿತಿ ಒತ್ತಾಯಿಸಿದೆ.

ಎನ್‌ಇಪಿ-2020, ಅಪ್ರಜಾತಾಂತ್ರಿಕ ಹೇರಿಕೆಯನ್ನು ಕೈಬಿಡಬೇಕು. ಸ್ವ ಹಣಕಾಸು ಸಂಸ್ಥೆಗಳನ್ನು ರಚಿಸುವುದನ್ನು ನಿಲ್ಲಿಸಿ, ತಾರತಮ್ಯವಿಲ್ಲದೇ ಎಲ್ಲಾ ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನೀಡುವಂತೆ, ಖಾಲಿ ಇರುವ ಶಿಕ್ಷಕರ ಹುದ್ದೆ ಭರ್ತಿ ಮಾಡಿ, ಅತಿಥಿ ಶಿಕ್ಷಕರ ಹಕ್ಕುಗಳನ್ನು ರಕ್ಷಿಸುವಂತೆ ಸಮಿತಿ ರಾಜ್ಯ ಅಧ್ಯಕ್ಷರಾದ ಕೆ.ಎಸ್. ಅಶ್ವಿನಿ, ಕಾರ್ಯದರ್ಶಿ ಅಜಯ್ ಕಾಮತ್ ಮನವಿ ಮಾಡಿದ್ದಾರೆ.

ರಾಜ್ಯದ ವಿದ್ಯಾರ್ಥಿಗಳು ಅನೇಕ ವರ್ಷಗಳಿಂದ ಶೈಕ್ಷಣಿಕ ಸಮಸ್ಯೆಗಳನ್ನು ಎದುರಿಸುತ್ತಾ ಬಂದಿದ್ದಾರೆ. ಸರ್ಕಾರ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಮುಂದಾಗಬೇಕು ಎಂದು ಹೇಳಿದ್ದಾರೆ.

ಎನ್‌ಇಪಿಯಿಂದ ಉಂಟಾಗಿರುವ ಗೊಂದಲದಿಂದಾಗಿ ಪದವಿ ಕಾಲೇಜುಗಳು ಇನ್ನು ಚೇತರಿಸಿಕೊಂಡಿಲ್ಲ. ಬಹು ಪ್ರಿಯ ಶಿಸ್ತೀಯ ಅಧ್ಯಯನದ ಹೆಸರಿನಲ್ಲಿ ಶಿಕ್ಷಣವನ್ನು ಬುಡಮೇಲು ಮಾಡಲು ಹೊರಟಿರುವ ಎನ್‌ಇಪಿ ಕುರಿತಾಗಿ, ಯಾವೊಬ್ಬ ಶಿಕ್ಷಕರಿಗೂ ಸಮ್ಮತಿ ಇಲ್ಲ ಎಂದು ತಿಳಿಸಿದ್ದಾರೆ.

ರಾಜ್ಯದ ಅನೇಕ ಪದವಿ ಕಾಲೇಜುಗಳನ್ನು ಈಗಾಗಲೇ ಸ್ವಾಯತ್ತ ಸಂಸ್ಥೆಗಳನ್ನಾಗಿ ಮಾಡಲಾಗಿದೆ. ಮುಂದೆ ಅದು ಸ್ವ ಹಣಕಾಸಿನ ವಿಶ್ವವಿದ್ಯಾಲಯಗಳು ಆದಲ್ಲಿ ಬಡ ವಿದ್ಯಾರ್ಥಿಗಳಿಂದ ಉನ್ನತ ಶಿಕ್ಷಣವನ್ನು ಕಸಿದಂತಾಗುತ್ತದೆ. ಸ್ವ ಹಣಕಾಸಿನ ಸಂಸ್ಥೆಗಳನ್ನು ರಚಿಸುವುದನ್ನು ನಿಲ್ಲಿಸಬೇಕೆಂದು ಮನವಿ ಮಾಡಿದ್ದಾರೆ.

# ಪವರ್ ಲಿಫ್ಟಿಂಗ್‌ನಲ್ಲಿ ಕೆಎಸ್‌ಆರ್‌ಟಿಸಿ ನಿರ್ವಾಹಕನ ಮಗಳ ಸಾಧನೆ : ಸಚಿವ ಎಸ್ಸೆಸ್ಸೆಂ ಅಭಿನಂದನೆ



ದಾವಣಗೆರೆ, ಜೂ.23- ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಪವರ್ ಲಿಫ್ಟಿಂಗ್‌ನಲ್ಲಿ ಸಾಧನೆ ಮಾಡಿದ ಕೆಎಸ್‌ಆರ್‌ಟಿಸಿ ನಿರ್ವಾಹಕನ ಮಗಳನ್ನು ಜಿಲ್ಲಾ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅಭಿನಂದಿಸಿದರು.

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಶಕ್ತಿ ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಯುವತಿಯನ್ನು ಅಭಿನಂದಿಸಿದ ಸಚಿವರು, ಅಂತರರಾಷ್ಟ್ರೀಯ ಮಟ್ಟದಲ್ಲೂ ಸಹ ಉತ್ತಮ ಸಾಧನೆ ಮಾಡುವಂತೆ ಶುಭ ಹಾರೈಸಿದರು.

ಕೆಎಸ್‌ಆರ್‌ಟಿಸಿ ನಿರ್ವಾಹಕ ರಾಜಪ್ಪ ಅವರ ಪುತ್ರಿ ಕು|| ಜಿ.ಆರ್. ಸುಶ್ರುತ ಅವರೇ ಪವರ್ ಲಿಫ್ಟಿಂಗ್‌ನಲ್ಲಿ ಸಾಧನೆ ಮಾಡಿದ ಯುವತಿ. ಮಹಾನಗರ ಪಾಲಿಕೆ ಕ್ರೀಡಾಪಟು ಆಗಿದ್ದು, ವ್ಯಾಯಾಮ ಶಾಲೆಯ ಹಿರಿಯ ಪವರ್‌ಲಿಫ್ಟರ್ ಏಕಲವ್ಯ ಪ್ರಶಸ್ತಿ ಪುರಸ್ಕೃತ ದಾದಾಪೀರ್ ಅವರು ಕು|| ಸುಶ್ರುತ ಅವರಿಗೆ ತರಬೇತುದಾರರು.

ಈ ಸಂದರ್ಭದಲ್ಲಿ ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ, ಕೆ.ಎಸ್.ಬಸವಂತಪ್ಪ, ಮೇಯರ್ ವಿನಾಯಕ ಪೈಲ್ವಾನ್, ಕೆಎಸ್‌ಆರ್‌ಟಿಸಿ ನಿರ್ವಾಹಕ ರಾಜಪ್ಪ, ತರಬೇತುದಾರ ದಾದಾಪೀರ್ ಮತ್ತಿತರರಿದ್ದರು.


**ವಾಸದ ಮನೆ ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕೈರ್ ಡ್ಯೂ ಫ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು, ಹಾಗೂ ಎಲ್ಲಾ ಸೌಕರ್ಯವಿರುವ ವಾಸದ ಮನೆ ಭೋಗ್ಯಕ್ಕಿದೆ. ಬಿ.ಎಸ್. ಸಂತೋಷ್
96322 67555

**ಸೈಟುಗಳು ಮಾರಾಟಕ್ಕಿದೆ**
ಹಳೇ ಬನಶಂಕರಿ ಪೂರ್ವ 40x43, 30x65, ಪೂರ್ವ-ದಕ್ಷಿಣ ಕಾರ್ನರ್, ಪಶ್ಚಿಮ 30x67 (ಅಕ್ಕ-ಪಕ್ಕ) 40x78 (ಅಕ್ಕ-ಪಕ್ಕ) (60 ಅಡಿ ರಸ್ತೆ, ಶಿವ-ಪಾರ್ವತಿ ಬಡಾವಣೆ ಪೂರ್ವ 30x55, 30x35, ಪಶ್ಚಿಮ 30x55, ಉತ್ತರ 30x50.
ಐಗೂರು ವಿಜಯಕುಮಾರ
99457 02495

**ಸೈಟುಗಳು ಮಾರಾಟಕ್ಕೆ**
ಬನಶಂಕರಿ ಬಡಾವಣೆ, ಡಾಲರ್ಸ್‌ಕಾಲೋನಿ, ಶಿವ-ಪಾರ್ವತಿ, ಸಿದ್ದವೀರಪ್ಪ, ಗ್ಲಾಸ್ ಹೌಸ್ ಲೇಔಟ್ ಹಾಗೂ ದಾವಣಗೆರೆಯ ಎಲ್ಲಾ ಬಡಾವಣೆಯಲ್ಲಿ 30x40, 30x50, 40x60, 50x80, ಸೈಟುಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ ಹಾಗೂ ಹೊಲಗಳಿಗೆ ವಿಚಾರಿಸಿ:
97315 12365

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**WANTED**
Accountant for Electronics Shop
BHERAV DISTRIBUTOR
Jaydev Circle Davangere
Minimum 2 year experience in Account handling. Boys only
Qualification : B.Com or MBA
94480 84144

**ಮನೆಗಳು ಬಾಡಿಗೆಗೆ ಇವೆ**
ಸಿಂಗಲ್ ಬೆಡ್ ರೂಂ ಡಬಲ್ ಬೆಡ್ ರೂಂ ಮನೆಗಳು ಆಫೀಸ್‌ಗೆ ಯೋಗ್ಯವಿರುವ ಮೂರು ಬೆಡ್ ರೂಂ ಮನೆ ಮೊದಲನೇ ಬಸ್ ಸ್ಟ್ಯಾಂಡ್ ಹತ್ತಿರ ಇಂಡಿಪೆಂಡೆಂಟ್ ಹೌಸ್, ವಿದ್ಯಾನಗರ ಆಂಜನೇಯ ಬಡಾವಣೆ, ಶಿವಕುಮಾರ ಸ್ವಾಮಿ ಬಡಾವಣೆ, ವಿನಾಯಕ ಬಡಾವಣೆಯಲ್ಲಿ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**2BHK ಮನೆ ಬಾಡಿಗೆಗೆ**
2 BHK ಸುಸಜ್ಜಿತ ಮನೆ, ಕಾರ್ಪೊರೇಷನ್/ಬೋರ್‌ವೆಲ್ ನೀರಿನ ಸೌಕರ್ಯ, ಸೋಲಾರ್ ಕರೆಂಟ್ ವ್ಯವಸ್ಥೆ ಇದ್ದು, ಚಂದ್ರಶೇಖರ ನಿಲಯ, ಡೋ.ನಂ. 1852/ಸಿ6, ಲಕ್ಷ್ಮಿ ಫ್ಲೋರ್ ಮಿಲ್ ಹಿಂಭಾಗ, ಎಸ್. ಎಸ್ ಬಡಾವಣೆ 'ಎ' ಬ್ಲಾಕ್, 2ನೇ ಕ್ರಾಸ್, ಬೂಸೂರ್ ಸ್ಕೂಲ್ ರೋಡ್, ದಾವಣಗೆರೆ ಇಲ್ಲಿ ಬಾಡಿಗೆಗಿದೆ. ಸಸ್ಯಹಾರಿಗಳು ಮಾತ್ರ ಸಂಪರ್ಕಿಸಿ :
94487 98340, 97416 03602
94484 42653

**EC / ಇಸಿ, E-swathu, Khatha Change Building Licence & Other Property Documents**
96118-66449

**ಬೇಕಾಗಿದ್ದಾರೆ**
ಬೆಣ್ಣೆದೋಸೆ ಹಾಕುವ ಭಟ್ಟರು ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ವಸತಿಯೊಂದಿಗೆ ಉತ್ತಮ ಸಂಬಳವಿರುತ್ತದೆ.
90369 26319, 91138 91284

**ಮನೆ ಲೀಸ್‌ಗೆ ಇದೆ**
3BHK ಇಂಡಿಪೆಂಡೆಂಟ್ ಹೌಸ್, 5ನೇ ಮೇನ್, 5ನೇ ಕ್ರಾಸ್, ಸೇಂಟ್‌ಪೌಲ್ಸ್ ಕಾನ್ವೆಂಟ್ ರೋಡ್, ಪಿ.ಜೆ. ಬಡಾವಣೆ, ದಾವಣಗೆರೆ.
88616 89590

**ಮನೆ ಬಾಡಿಗೆಗೆ ಇದೆ**
ನಿಜಲಿಂಗಪ್ಪ ಬಡಾವಣೆ # 264 'ಕನಕಶ್ರೀ' 2ನೇ ಕ್ರಾಸ್ ಆರ್.ವಿ. ಪಬ್ಲಿಕ್ ಶಾಲೆ ರಸ್ತೆ ಅಪಾರ್ಟ್ ಮೆಂಟ್, 3ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. ವಿಚಾರಿಸಿ :
80958 99966, 98443 26096

**ಬಾಡಿಗೆಗೆ**
ಹಳೇ ಪಿ.ಬಿ. ರಸ್ತೆ, ಶ್ರೀಗಂಧ ಲಾಡ್ಜ್ ಪಕ್ಕದಲ್ಲಿ
1. ಗ್ರೌಂಡ್ ಫ್ಲೋರ್ - 800 ಅಡಿ
2. ಮೊದಲನೇ ಮಹಡಿ - 4000 ಅಡಿ
3. ಎರಡನೇ ಮಹಡಿ - 4000 ಅಡಿ
4. Terrace Floor - 4000 ಅಡಿ
5. Basement - 4000 ಅಡಿ
ಸಂಪರ್ಕಿಸಿ : ಮೊ. 94480 28103

**ಲೋನ್ ಕೊಡಲಾಗುತ್ತದೆ**
ಪ್ರಾವಿಜನ್ ಸ್ಟೋರ್, ಬಟ್ಟೆ ಅಂಗಡಿ, ಫ್ಯಾನ್ಸಿ ಸ್ಟೋರ್, ಸಣ್ಣ ವ್ಯಾಪಾರಿಗಳಿಗೆ ಸಾಲ ಸೌಲಭ್ಯವಿದೆ, ಹೋಂ ಲೋನ್, ಮನೆ ರಿಪೇರಿ, ರಿ ಫೈನಾನ್ಸ್‌ಗೂ ಸಾಲ ಸೌಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
74835 24662

**ಮನೆ ಬಾಡಿಗೆಗೆ ಇದೆ**
2 BHK, ಗ್ರೌಂಡ್ ಫ್ಲೋರ್ ವಾಸ್ತು ಪ್ರಕಾರ ನೀರಿನ ಸೌಲಭ್ಯ, ಮುನ್ಸಿಪಲ್ ಹಾಗೂ ಬೋರ್‌ವೆಲ್, ಕಾರ್ ಪಾರ್ಕಿಂಗ್ ಇದೆ. SS ಬಡಾವಣೆ, 2ನೇ ಕ್ರಾಸ್, ವಿವಿ ರೆಸಿಡೆನ್ಸ್ #1678/A, ದಾವಣಗೆರೆ.
9448727266, 9448134340, 9449615656

**ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಶಾಪ್‌ನಲ್ಲಿ ಕ್ಲೀನಿಂಗ್ ಕೆಲಸ ಮಾಡಲು ಪಾರ್ಟ್ ಟೈಂ / ಫುಲ್ ಟೈಂ ಕೆಲಸಕ್ಕೆ ಬೇಕಾಗಿದ್ದಾರೆ. ಮಾಮಾಸ್ ಜಾಯಿಂಟ್ ರೋಡ್ ದಾವಣಗೆರೆ.
96118 50369

**ಬೇಕಾಗಿದ್ದಾರೆ**
PUC /DEGREE
ಆದ ಮಹಿಳೆಯರು ರ್‍ಯಾಕ್‌ನಿಂದ ಸ್ಟಾಕ್ ತೆಗೆಯಲು ಮಹಿಳೆಯರು ಔಷಧಿ ಅಂಗಡಿಗೆ ಬೇಕಾಗಿದ್ದಾರೆ. ಭೇಟಿ ಮಾಡುವ ಸಮಯ ಸಂಜೆ:6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**ಬೇಕಾಗಿದ್ದಾರೆ**
ರೆಡಿಮೇಡ್ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ ಹಾಗೂ ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ.
99806 12203, 91102 82125

**3 BHK on Lease Only**
First Floor House
# 2396/12, 10th Cross (Main) , 16th Division, MCC 'A' Block, Davanagere-4.
8383019890, 9899414922

**WANTED TEACHERS**
With Diploma, B.Com and B.Sc & fluent in English to teach in Davangere schools. Contact :
98448 35527

**ಖಾಲಿ ಜಾಗ ಬಾಡಿಗೆ/ಲೀಜ್**
1.5 ಎಕರೆ / 65000 Sqft ಆನಗೋಡು ಹೆದ್ದಾರಿ, ಪಿ.ಬಿ. ರಸ್ತೆ, RGUHS Univercity Building and Indian family Daba ನಡುವೆ. ವಾಣಿಜ್ಯ ಉಪಯೋಗಕ್ಕಾಗಿ ಹಾಗೂ ಇತರೆ ಉಪಯೋಗಕ್ಕಾಗಿ ಇದೆ.
98444 81661

**ಬೇಕಾಗಿದ್ದಾರೆ**
ಪ್ರತಿಷ್ಠಿತ ಶಾಲೆಗೆ ಆಯಾ ಕೆಲಸ ಮಾಡಲು ಹೆಣ್ಣು ಮಕ್ಕಳ ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು.
96060-75754, 97388-18702

**ಬೇಕಾಗಿದ್ದಾರೆ**
ಕಂಪನಿಗಳಿಗೆ ತಕ್ಷಣ ಬೇಕಾಗಿದ್ದಾರೆ SSLC, PUC, ITI, Diploma, Degree, ಪಾಸ್ / ಫೇಲ್ ಮತ್ತು ಅವಿದ್ಯಾವಂತರು ನೇರ ನೇಮಕಾತಿ. ಸಂಬಳ - 18000/- ದಿಂದ 70000/- ವಸತಿ, ಊಟದ ವ್ಯವಸ್ಥೆ ಇದೆ.
96862 20858

**ಕುರಿ ಮಾರಾಟಕ್ಕಿವೆ**
25 ಟಗರು ಮರಿ ಮಾರಾಟಕ್ಕಿದೆ ಸಂಪರ್ಕಿಸಿ.
80883 67539, 91486 83775

**WANTED**
Boys and Girls required for billing work at
Food Mart Supermarket
Quli : B.Com
M : 98864 63531

**ಸೈಟ್ ಮಾರಾಟಕ್ಕಿವೆ**
ಶಂಕರ ವಿಹಾರ ಬಡಾವಣೆಯಲ್ಲಿ 30x80 ಮತ್ತು 30x75 ಅಡಿಯುಳ್ಳ ಅಕ್ಕ-ಪಕ್ಕದ ಸೈಟ್ ಮಾರಾಟಕ್ಕಿವೆ. ಸಂಪರ್ಕಿಸಿ :
94810 93644

**ದೊಡ್ಡ ಹಾಲ್ ಬಾಡಿಗೆಗೆ**
ಕೆ.ಬಿ. ಬಡಾವಣೆ, ಕೆನರಾ ಬ್ಯಾಂಕ್ ಮೇಲಿನ ಮೊದಲನೇ ಮಹಡಿ 3000 ಚ.ಅಡಿವುಳ್ಳ ಹಾಲ್ ಬಾಡಿಗೆಗೆ ಆಸಕ್ತರು ಸಂಪರ್ಕಿಸಿ :
98451 54400

**ಸೈಟಿನ ಮೂಲ ಕ್ರಯ ಪತ್ರ ಕಳೆದಿದೆ**
ಹೆಚ್. ಮಹಮ್ಮದ್ ಅಲಿ ಹೆಸರಿನಲ್ಲಿರುವ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯ ದೊಡ್ಡ ಬೂದಿಹಾಳ ವಿಭಾಗದ ಜೆ.ಎಂ. ಬಡಾವಣೆಯಲ್ಲಿನ ಡೋರ್ ನಂ. 613, 9/2080, ಸೈಟು ನಂ.80 15x40 ಅಳತೆಯ ಸೈಟಿನ ಮೂಲ ಕ್ರಯ ಪತ್ರವು ದಿನಾಂಕ 1.6.2023ರಲ್ಲಿ ಜೆರಾಕ್ಸ್ ಅಂಗಡಿಯಲ್ಲಿ ಕಳೆದಿರುತ್ತದೆ. ಸಿಕ್ಕವರು ಹತ್ತಿರದ ಪೊಲೀಸ್ ಠಾಣೆಗಾಗಲೀ ಅಥವಾ ಈ ಕೆಳಗಿನ ಫೋನಿಗೆ ತಿಳಿಸಲು ಕೋರಿದೆ.
97411 44828

**ಮನೆಗಳು ಮಾರಾಟಕ್ಕಿವೆ**
ತರಳಬಾಳು ಬಡಾವಣೆ ದಕ್ಷಿಣ 30x60 (ಡುಪ್ಲೆಕ್ಸ್) ಸಿದ್ದವೀರಪ್ಪ ಬಡಾವಣೆ 30x46 ಪೂರ್ವ, ಜೆ.ಹೆಚ್. ಪಟೇಲ್ ಬಡಾವಣೆ ಉತ್ತರ 30x50 (ಮೇಲೆ ಸಿಂಗಲ್ ಅಟ್ಯಾಚ್ ರೂಂ) ಎಸ್. ಎಸ್. 'ಎ' ಬ್ಲಾಕ್ 30x40 ಪಶ್ಚಿಮ (Site rate)
ಐಗೂರು ವಿಜಯಕುಮಾರ
99457 02495

**ಸೈಟ್ ಮಾರಾಟಕ್ಕೆ**
ಡಾಲರ್ಸ್ ಕಾಲೋನಿ (40x51) ಪಶ್ಚಿಮ, ಕುಂದುವಾಡ ಸೈಟ್ 44 (30x50) ಪಶ್ಚಿಮ ನೈರುತ್ಯ ಮೂಲೆ & ಸೈಟ್ 43 (30x50) ಪಶ್ಚಿಮ (ಅಕ್ಕ-ಪಕ್ಕ)
ಫೋ. : 97404 47907

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 25ರವರೆಗೆ. ಊಟ, ರೂಂ ಉಚಿತ. ಸಂಬಳ : 12000/-. ಸಂಪರ್ಕಿಸಿ.
97400 98047

**ಮನೆ ಮಾರುವುದಿದೆ**
ಜಯನಗರ 'ಎ' ಬ್ಲಾಕ್ ಕಾಳಿದಾಸ ಸರ್ಕಲ್ ಹಿಂಭಾಗ 30x40 ಅಳತೆಯ ಎರಡು ಅಂತಸ್ತಿನ ಪಶ್ಚಿಮ ದಿಕ್ಕಿನ ಕಾರ್ನರ್ ಎರಡು ವರ್ಷದ ಸುಸಜ್ಜಿತ ಹೊಸ ಮನೆ ಮಾರುವುದಿದೆ. ಸಂಪರ್ಕಿಸಿ.
9482764316
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

**ಮನೆ ಬಾಡಿಗೆಗೆ ಇದೆ**
(ಸಸ್ಯಹಾರಿಗಳಿಗೆ ಮಾತ್ರ)
ಬನಶಂಕರಿ ಬಡಾವಣೆ, 1ನೇ ಮುಖ್ಯರಸ್ತೆ, #5450/16, ಮೊದಲನೇ ಮಹಡಿ, 3 BHK ಮನೆ ಬಾಡಿಗೆಗೆ ಇದೆ. ಕಾರು ಪಾರ್ಕಿಂಗ್, ಕಾರ್ಪೊರೇಷನ್ ನೀರಿನ ಸೌಕರ್ಯವಿರುತ್ತದೆ.
ಫೋ. : 90080 58144

**ಮನೆಗಳು ಮಾರಾಟಕ್ಕೆ**
ಜಯನಗರ 30x40, 30x50 ಡುಪ್ಲೆಕ್ಸ್, 21x40, ಎರಡು ಮನೆ, ಭೂಮಿಕ 30x40 ಮತ್ತು ಸಣ್ಣ ಮನೆಗಳು ಮಾರಾಟಕ್ಕಿವೆ.
ಏಜೆಂಟ್ ಶಾಂತಪ್ಪ ಪೂಜಾರಿ
99647 29123

**ಮನೆಗಳು ಬಾಡಿಗೆಗೆ ಇವೆ**
SS ಹೈಟೆಕ್ ಆಸ್ಪತ್ರೆ ರಸ್ತೆ, ಕಾಳಿದಾಸ ಸರ್ಕಲ್ ಹತ್ತಿರ, ಜಯನಗರ 1ನೇ ಹಂತದ 'ಬಿ' ಬ್ಲಾಕ್, 3ನೇ ಕ್ರಾಸ್, #1017/68ನಲ್ಲಿ 1ನೇ ಮಹಡಿ, ಹೊಸದಾಗಿ ಕಟ್ಟಿಸಿದ ನೂತನ ಸೌಲಭ್ಯಗಳ ಡಬಲ್ ಬೆಡ್ ರೂಂ ಮನೆ, ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ.
(ಸಸ್ಯಹಾರಿಗಳಿಗೆ ಮಾತ್ರ), 9480423743

**ತೋಟದ ಕೆಲಸಗಾರರು ಬೇಕಾಗಿದ್ದಾರೆ**
ಹರಪನಹಳ್ಳಿ ತಾ. ಚಟ್ನಹಳ್ಳಿ ಗ್ರಾಮದಲ್ಲಿರುವ ತೋಟಕ್ಕೆ ಕೆಲಸಗಾರರು ಬೇಕಾಗಿದ್ದಾರೆ. ಅವರಿಗೆ ವಸತಿ ವ್ಯವಸ್ಥೆ ಇರುತ್ತದೆ.
98451 54400

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**WANTED**
Wanted Female for
* Office work - 2
* Computer Teacher - 2
* Spoken English Teacher - 1
At AVK Road, Davanagere.
95910 78215

**ಅಡಿಕೆ ಸಸಿಗಳಿಗಾಗಿ ಸಂಪರ್ಕಿಸಿರಿ**
ಫೋ. :99866 17127

**ಗ್ಯಾಸ್ ಗೀಜರ್**
Fully Automatic, 2990/- Rs.
R.O. +uv ವಾಟರ್ ಫಿಲ್ಟರ್, 5490/-
ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ :
ಮರುತ್ ಎಂಟರ್ ಪ್ರೈಸಸ್
ವೈಎಂಸಿ ಕಾಂಪ್ಲೆಕ್ಸ್, ಹದಡಿ ರಸ್ತೆ ಸ್ಟೇಡಿಯಂ ಎದುರು, ದಾವಣಗೆರೆ.
98868 96574
98458 67574

**ಮನೆ ಬಾಡಿಗೆಗೆ ಇದೆ**
ಸಾಯಿಬಾಬಾ ದೇವಸ್ಥಾನ ಹಿಂಭಾಗ ಎಂಸಿಸಿ ಎ ಬ್ಲಾಕ್
**ಸೈಟು ಮಾರಾಟಕ್ಕಿದೆ**
ಮಲ್ಲಶೆಟ್ಟಿಹಳ್ಳಿ ಹತ್ತಿರ NH-4 ಗೆ ಹೊಂದಿಕೊಂಡಿರುವ (30x40) (ಪೂರ್ವ-ಉತ್ತರ)
70196 18397

**ರಕ್ತ ದಾನ ಶ್ರೇಷ್ಠ ದಾನ**

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2&3ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಿಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಮನೆ ಬಾಡಿಗೆಗೆ/ಲೀಸ್‌ಗಿದೆ**
3 BHK, 1ನೇ ಮಹಡಿ, ಸ್ವಂತ ಬೋರ್‌ವೆಲ್, ಕಛೇರಿಗೂ ಲಭ್ಯವಿದೆ. (ಸಸ್ಯಹಾರಿಗಳಿಗೆ ಮಾತ್ರ)
ಸಿ.ವಿ. ಶಿವಕುಮಾರ್, ಬಳ್ಳಾರಿ ಸಿದ್ದಮ್ಮ ಪಾರ್ಕ್ ಹತ್ತಿರ, ಕೆಬಿ ಬಡಾವಣೆ, ದಾವಣಗೆರೆ.
81478 74601

**ಮನೆ ಬಾಡಿಗೆಗೆ ಇದೆ**
#1828/A25, ಆಂಜನೇಯ ಬಡಾವಣೆ, 18ನೇ ಕ್ರಾಸ್‌ನಲ್ಲಿ 1ನೇ ಮಹಡಿಯಲ್ಲಿ ಪೂರ್ವ ದಿಕ್ಕಿಗೆ ವಾಸ್ತು ಪ್ರಕಾರದ ಸಿಂಗಲ್ ಬೆಡ್‌ರೂಂ, ಬೋರ್‌ವೆಲ್ ನೀರಿನ ಸೌಲಭ್ಯವಿರುವ ಮನೆ ಬಾಡಿಗೆಗಿದೆ.
94498 05750, 94494 22901

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
11 ದಿನಗಳ ಉತ್ತರ ಭಾರತ
ಪ್ರವಾಸ ದಿನಾಂಕ 28.6.2023ರಿಂದ 8.7.2023ರವರೆಗೆ ಕಾಶಿ, ಅಯೋಧ್ಯೆ, ಪ್ರಯಾಗರಾಜ್, ಆಗ್ರಾ, ಮಥುರಾ, ದೆಹಲಿ ಪ್ರವಾಸ. ಆಸಕ್ತರು ಸಂಪರ್ಕಿಸಿ.
99800 32271, 94485 33928

**WANTED TEACHERS**
BSc., BEd-3, PCM/CBZ, NTC-2 clerk-B.Com.,
Interested candidates can immediately apply to
VINAYAKA CONVENT
Ganeshpet. Kalikadevi Road Dvg.
VINAYAKA PUBLIC SCHOOL
kondajji road, near HP gas godown Dvg.
95356 10817
(we will be given attractive salary to right candidates)

**ಸೈಟ್ & ಮನೆ & ಹೊಲಕ್ಕೆ ಸಂಪರ್ಕಿಸಿ**
ಡಾಲರ್ಸ್‌ನಲ್ಲಿ 30x50 ಪೂರ್ವ ದಿಕ್ಕು ಸೈಟ್ ಇದೆ ಸರಕಾರಿ ನೌಕರರ ಬಡಾವಣೆಯಲ್ಲಿ 'ಬಿ' ಬ್ಲಾಕ್‌ನಲ್ಲಿ 30x50 ಪೂರ್ವ & 'ಎ' ಬ್ಲಾಕ್‌ನಲ್ಲಿ 30x40 ಪಶ್ಚಿಮ ಸೈಟ್ ಇದೆ, ಶ್ರೀ ಸಾಮಾನ್ಯದಲ್ಲಿ 3 ಸೈಟ್ ಉತ್ತರ ಇವೆ 2 ಸೈಟ್ ದಕ್ಷಿಣ ಇವೆ. ಮಿಟ್ಲಕಟ್ಟೆಯಲ್ಲಿ 34 ಗುಂಟೆ ಜಮೀನು (ಮಾರಾಟಕ್ಕೆ) ಇದೆ ಜೆ.ಹೆಚ್. ಪಟೇಲ್‌ನಲ್ಲಿ 30x40 ಪಶ್ಚಿಮ ಸೈಟ್ ಇದೆ. (Saleded ಆಗಿದೆ)
ಸಂಪರ್ಕಿಸಿ : ಸುರೇಶ್ P.S. ಶಾಮನೂರು
84314 00907

**ಬೇಕಾಗಿದ್ದಾರೆ**
ಪ್ರತಿಷ್ಠಿತ ಶಾಲಾ ಹಾಸ್ಟೆಲ್‌ನಲ್ಲಿಯೇ ಇದ್ದು ಕೆಲಸ ನಿರ್ವಹಿಸಲು ವಾರ್ಡನ್ಸ್, ಸೆಕ್ಯೂರಿಟಿ ಗಾರ್ಡ್ಸ್ ಮತ್ತು ಹಾಸ್ಟೆಲ್ ಕೆಲಸಕ್ಕೆ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ. :
96207 68987

**ಹುಡುಗರು ಬೇಕಾಗಿದ್ದಾರೆ**
CCtv, Camera, RO Water filter ಕೆಲಸಕ್ಕೆ ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ.
ಫೋ : 93805 83672

**ನಂ.1. ವಶೀಕರಣಂ**
ಕನ್ನಡ, ತೆಲುಗು, ಹಿಂದಿ ಭಾಷೆಯಲ್ಲಿ ಭವಿಷ್ಯ, ಸ್ತ್ರೀ-ಪುರುಷರ ಎಲ್ಲಾ ರೀತಿಯ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಶ್ರೀ ಲಕ್ಷ್ಮಿಕಾಂತ್ ಗುರೂಜಿ, ಆಂಧ್ರಪ್ರದೇಶ ಲಾಯರ್ ರಸ್ತೆ, ದಾವಣಗೆರೆ.
9740064163

**ಅಕೌಂಟೆಂಟ್ ಬೇಕಾಗಿದ್ದಾರೆ**
ಬಿ.ಕಾಂ. ಟ್ಯಾಲಿ ಆಗಿರುವ ಅಕೌಂಟೆಂಟ್ ಬೇಕಾಗಿದ್ದಾರೆ. ಟೆಸ್ಟಿಂಗ್ ಇಂಜಿನಿಯರ್ ಡಿಪ್ಲೋಮಾ ಆಗಿರಬೇಕು. ಸಂಪರ್ಕಿಸಿ. ಪಿವಿಸಿ ಪಂಪ್ಸ್ ಪ್ರೈ.ಲಿ.1 ಸಿ, KIADB ಇಂಡಸ್ಟ್ರೀಯಲ್ ಏರಿಯಾ, ಲೋಕಿಕೆರೆ, ರಸ್ತೆ, ದಾವಣಗೆರೆ.
08192 260014, 94813 28826

**ಕೋಚಿಂಗ್**
LKG to 9th SSLC & PUC, PCMB, Arts, Commerce.
ಸಿಂಚನ ಅಕಾಡೆಮಿ
ರಾಮ್ ಅಂಡ್ ಕೋ ಸರ್ಕಲ್ ದಾವಣಗೆರೆ.
90195 80600

**2 BHK HOUSE FOR LEASE/RENT**
Near Podar International School in J.H. Patel Badawane, Davangere.
9535841058, 8861711072

**ನಮ್ಮಲ್ಲಿ ಯೋಗ್ಯ ತಳಿಯ ಅಡಿಕೆ ಸಸಿಗಳು ದೊರೆಯುತ್ತವೆ. ಬೇಕಾದಲ್ಲಿ ಸಂಪರ್ಕಿಸಿ. :**
98441 22269, 86182 17245

**ಶಿಕ್ಷಕಿಯರು ಬೇಕಾಗಿದ್ದಾರೆ**
BA, B.Ed-2,
TCH / D.Ed-2,
Computer - 1
ಶಿವಗಂಗೋತ್ರಿ ಪಬ್ಲಿಕ್ ಸ್ಕೂಲ್
ಶಾಮನೂರು / ಜರೀಕಟ್ಟೆ.
81518 52444

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಶಾಸಕ ಎಸ್ಸೆಸ್ ಜನ್ಮದಿನ : 93 ಮಂದಿ ರಕ್ತದಾನ ಶಿಬಿರ

## ರಕ್ತದಾನದಿಂದ ಕಷ್ಟದಲ್ಲಿರುವ ರೋಗಿಗಳಿಗೆ ಅನುಕೂಲ: ಡಾ.ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ, ಜೂ.23 - ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರಾಧ್ಯಕ್ಷರು ಹಾಗೂ ಕಾಂಗ್ರೆಸ್‌ನ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರ 93ನೇ ಹುಟ್ಟು ಹಬ್ಬದ ಪ್ರಯುಕ್ತ ನಗರದ ಐಎಂಎ ಹಾಲ್ ನಲ್ಲಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರವನ್ನು ಬಾಪೂಜಿ ವಿದ್ಯಾಸಂಸ್ಥೆಯ ನಿರ್ದೇಶಕರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಪ್ರಭಾ ಮಲ್ಲಿಕಾರ್ಜುನ್, ರಕ್ತದಾನ ಶ್ರೇಷ್ಠವಾದದ್ದು, ರಕ್ತ ನೀಡುವ ಮೂಲಕ ಕಷ್ಟದಲ್ಲಿರುವವರಿಗೆ ನೆರವಾಗಬೇಕು. ರಕ್ತದಾನ ಮಾಡುವುದರಿಂದ ಇನ್ನೊಬ್ಬರ ಪ್ರಾಣ ಉಳಿಸಿದಂತಾಗುತ್ತದೆ ಎಂದು ಹೇಳಿದರು.

ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರ ಕಳೆದ ಜನ್ಮ ದಿನದಂದು 5555 ಮಂದಿ ರಕ್ತ ಸಂಗ್ರಹಣೆ ಮಾಡುವ ಗುರಿ ಜಿಲ್ಲೆಯಾದ್ಯಂತ ಹೊಂದಲಾಗಿತ್ತು. ಈಗಾಗಲೇ ಹಲವು ಕಡೆಗಳಲ್ಲಿ ರಕ್ತ ಸಂಗ್ರಹಣೆ ಮಾಡಲಾಗಿದೆ. ಮಲ್ಲಿಕಾರ್ಜುನ್ ಅವರದ್ದು ಸೆಪ್ಟೆಂಬರ್ ತಿಂಗಳಿನಲ್ಲಿ ಜನುಮ ದಿನವಿದೆ. ಅಷ್ಟೊತ್ತಿಗೆ ಈ ಗುರಿಯನ್ನು ತಲುಪುತ್ತೇವೆ. ಈ ಮೂಲಕ ರಕ್ತ ಸಂಗ್ರಹಣೆ ಮಾಡಿ ಅಗತ್ಯವಾಗಿ ಬೇಕಾಗಿರುವವರಿಗೆ ನೀಡಲಾಗುವುದು. ಈ ಮೂಲಕ ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡಿದಂತಾಗುತ್ತದೆ ಎಂದು ಹೇಳಿದರು.

ಮಹಾನಗರ ಪಾಲಿಕೆ ವಿರೋಧ ಪಕ್ಷದ ಮಾಜಿ ನಾಯಕ ಹಾಗೂ ಹಾಲಿ ಸದಸ್ಯ ಗಡಿಗುಡಾಳ್ ಮಂಜುನಾಥ್ ಮಾತನಾಡಿ, ರಕ್ತದಾನ ಮಾಡಲು ಮುಂದೆ ಬರುವವರ ಸಂಖ್ಯೆ ಕಡಿಮೆಯಾಗಿದೆ. ಹಲವು ಆಸ್ಪತ್ರೆಗಳಲ್ಲಿ ರಕ್ತಕ್ಕೆ ತುಂಬಾನೇ ಬೇಡಿಕೆ ಇದೆ. ಹಲವು ಕಾರಣಗಳಿಂದ ರಕ್ತ ಸಂಗ್ರಹಣೆ ಆಗಿಲ್ಲ. ಕಳೆದ ವರ್ಷಕ್ಕೆ ಹೋಲಿಸಿದರೆ, ಈ ವರ್ಷ ಶೇಕಡಾ 15 ರಿಂದ 20ರಷ್ಟು ಕಡಿಮೆ ಆಗಿದೆ. ಈ ನಿಟ್ಟಿನಲ್ಲಿ ಎಸ್ಸೆಸ್ ಅವರ ಜನುಮ ದಿನದ ಪ್ರಯುಕ್ತ 93 ಮಂದಿಯಿಂದ ರಕ್ತ ಸಂಗ್ರಹಿಸಲಾಗಿದೆ. ಈ ಮೂಲಕ ಜನುಮ ದಿನವನ್ನು ಅರ್ಥಪೂರ್ಣವಾಗಿ ಆಚರಿಸುತ್ತಿದ್ದೇವೆ ಎಂದು ತಿಳಿಸಿದರು.

ರಕ್ತದಾನ ಮಾಡಲು ಹಿಂದೆ ಸರಿಯುವುದು ಸರಿಯಲ್ಲ. ರಕ್ತದಾನ ಮಾಡುವುದರಿಂದ ನಮ್ಮ ಆರೋಗ್ಯವೂ ಸುಧಾರಿಸುತ್ತದೆ. ಜನರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಕಷ್ಟದಲ್ಲಿರುವ ರೋಗಿಗಳಿಗೆ, ಕುಟುಂಬದವರಿಗೆ ನೆರವು ಕೊಟ್ಟಂತಾಗುತ್ತದೆ. ಹಾಗಾಗಿ, ರಕ್ತದಾನ ಮಾಡಲು ಪ್ರತಿಯೊಬ್ಬರೂ ಮುಂದೆ ಬರಬೇಕು. ಶಾಮನೂರು ಶಿವಶಂಕರಪ್ಪನವರ ಹುಟ್ಟು ಹಬ್ಬದ ಪ್ರಯುಕ್ತ 93 ಮಂದಿಯಿಂದ ರಕ್ತ ಸಂಗ್ರಹಿಸುವ ಗುರಿ ಹೊಂದಿದ್ದೆವು. ಅದೇ ರೀತಿಯಲ್ಲಿ 93 ಜನರು ಸ್ವಯಂ ಪ್ರೇರಣೆಯಿಂದ ಬಂದು ರಕ್ತ ನೀಡಿದರು ಎಂದು ಹೇಳಿದರು.

ಈ ವೇಳೆ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರು ಗಿರೀಶ್, ಪಾಲಿಕೆ ಸದಸ್ಯ ರಾದ ಕೆ. ಚಮನ್ ಸಾಬ್, ಸೈಯ್ಯದ್ ಚಾರ್ಲಿ, ಆಶಾ ಉಮೇಶ್, ಎ. ನಾಗರಾಜ್, ಹುಲ್ಲುಮನೆ ಗಣೇಶ್ ಮತ್ತಿತರರು ಹಾಜರಿದ್ದರು.

## ಆಧುನಿಕ ಮಹಿಳೆಯರಿಗೆ ಯೋಗ ಅವಶ್ಯಕ : ಗೀತಮ್ಮಾಜಿ



ದಾವಣಗೆರೆ, ಜೂ. 23- ನಗರದ ಎಸ್‌ಬಿಸಿ ಪ್ರಥಮ ದರ್ಜೆ ಕಾಲೇಜು ಮತ್ತು ಅಥಣಿ ಪಿ.ಜಿ. ಸೆಂಟರ್‌ನಲ್ಲಿ ಯೋಗ ಗುರುಗಳಾದ ಗೀತಮ್ಮಾಜಿ ನೇತೃತ್ವದಲ್ಲಿ ವಿಶ್ವ ಯೋಗ ದಿನ ಆಚರಿಸಲಾಯಿತು. ಗೀತಮ್ಮಾಜಿ ಮಾತನಾಡಿ, ಆಧುನಿಕ ಜೀವನ ಶೈಲಿ ಯಿಂದಾಗಿ ಮತ್ತು ಅತಿಯಾದ ಸಾಮಾಜಿಕ ಜಾಲತಾಣದ ಬಳಕೆಯಿಂದ ಹೆಣ್ಣುಮಕ್ಕಳು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಮನೋರೋಗಕ್ಕೆ ಮದ್ದಿಲ್ಲ, ಆರ್ಥಿಕ, ಸಾಮಾಜಿಕ, ಕೌಟುಂಬಿಕ ಒತ್ತಡಗಳನ್ನು ಎದುರಿಸಲು ಹೆಣ್ಣು ಮಕ್ಕಳಿಗೆ ಯೋಗ ಅವಶ್ಯಕ ಎಂದು ತಿಳಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ. ಕೆ. ಷಣ್ಮುಖಪ್ಪ, ಸಮಾಜಶಾಸ್ತ್ರ ಉಪನ್ಯಾಸಕ ಮಂಜುನಾಥ್ ಮತ್ತು ಇತರರು ಉಪಸ್ಥಿತರಿದ್ದರು.

# ಹೆಣ್ಣು ಸ್ವಾವಲಂಬನೆಯತ್ತ ಹೆಜ್ಜೆ ಹಾಕಲಿ




ದಾವಣಗೆರೆ, ಜೂ. 23 - ಹೆಣ್ಣು ಮಕ್ಕಳು ವಿದ್ಯಾಭ್ಯಾಸದ ನಂತರದಲ್ಲಿ ಸರ್ಕಾರಿ ಉದ್ಯೋಗ ಸಿಗಲಿಲ್ಲವೆಂದು ಕೈಕಟ್ಟಿ ಕೂರದೆ ಸ್ವ-ಉದ್ಯೋಗ ಕೈಗೊಳ್ಳುವ ಮೂಲಕ ಆರ್ಥಿಕವಾಗಿ ಸ್ವಾವಲಂಬಿಗಳಾಗುವತ್ತ ಹೆಜ್ಜೆ ಹಾಕಲಿ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಅಧ್ಯಕ್ಷ ಬಿ.ವಾಮದೇವಪ್ಪ ಸಲಹೆ ನೀಡಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಆವರಣದಲ್ಲಿ ಶನಿವಾರ ನಡೆದ ಪಠ್ಯಪೂರಕ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಸರ್ಕಾರಿ ಕಾಲೇಜಿನ ವಿದ್ಯಾರ್ಥಿನಿಯರು ಯಾರಿಗೂ ಕಡಿಮೆ ಇಲ್ಲ ಎಂಬಂತೆ ಉತ್ತಮ ಸಾಧನೆ ತೋರಿರುವುದು ಸಂತಸದ ವಿಷಯ. ಎಲ್ಲರಿಗೂ ಬುದ್ಧಿ ಶಕ್ತಿ ಇರುತ್ತದೆ. ಅದನ್ನು ಕೆಲವರು ಸರಿಯಾಗಿ ಉಪಯೋಗಿಸಿಕೊಳ್ಳುತ್ತಾರೆ. ಮತ್ತೆ ಕೆಲವರು ಉಪಯೋಗಿಸಿಕೊಳ್ಳುವುದಿಲ್ಲ. ಬಡವನಾಗಿ ಹುಟ್ಟಿದರೂ ಬಡವನಾಗಿಯೇ ಸಾಯುವುದು ತಪ್ಪು. ಇರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವ ಮೂಲಕ ಹೆಚ್ಚಿನ ಸಾಧನೆ ಮಾಡಬೇಕು ಎಂದು ಅವರು ಹೇಳಿದರು.

### ಕಸಾಪ ಜಿಲ್ಲಾಧ್ಯಕ್ಷ ವಾಮದೇವಪ್ಪ

ಸಮಾರೋಪ ಭಾಷಣ ಮಾಡಿದ ಪತ್ರಕರ್ತರಾದ ಶ್ರೀಮತಿ ಎಚ್.ಅನಿತಾ, 'ವೈದ್ಯಕೀಯ, ಎಂಜಿನಿಯರಿಂಗ್ ಕೋರ್ಸ್‌ಗಳೇ ಶ್ರೇಷ್ಠವಲ್ಲ. ಬಿಎ, ಬಿಎಸ್ಸಿ, ಬಿಕಾಂ ಓದುವವರ ಸೇವೆಯೂ ಸಮಾಜಕ್ಕೆ ಅಗತ್ಯವಿದೆ. ಕೀಳರಿಮೆಯನ್ನು ತೊರೆದು ಹೆಚ್ಚಿನ ಸಾಧನೆ ಮಾಡುವ ಮೂಲಕ ಸಮಾಜಕ್ಕೆ ಉನ್ನತವಾದ ಕೊಡುಗೆ ನೀಡಬೇಕು' ಎಂದು ಹೇಳಿದರು.

ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಸಾಧನೆ ಮೂಲಕ ಗಮನ ಸೆಳೆದಿದ್ದರೂ, ದೌರ್ಜನ್ಯಗಳಿಂದ ಸಂಪೂರ್ಣ ಮುಕ್ತವಾಗಿಲ್ಲ. ಹೆಣ್ಣುಮಕ್ಕಳ ಮೇಲಿನ ಕೆಲ ಅಪರಾಧ ಪ್ರಕರಣಗಳು ಜನರನ್ನು ಬೆಚ್ಚಿಬೀಳಿಸುವಂತಿವೆ. ಪಾಲಕರು ಹೆಣ್ಣುಮಕ್ಕಳಿಗೆ ಮಾತ್ರವೇ ನಿರ್ಬಂಧಗಳನ್ನು ಹೇರದೆ ಗಂಡು ಮಕ್ಕಳಿಗೂ ಲಿಂಗ ಸೂಕ್ಷ್ಮತೆ ಕುರಿತು ಅರಿವು ಮೂಡಿಸುವ, ಹೆಣ್ಣುಮಕ್ಕಳನ್ನು ಗೌರವಿಸುವ ಮನೋಭಾವವನ್ನು ಬೆಳೆಸುವ ಅಗತ್ಯವಿದೆ ಎಂದು ಹೇಳಿದರು.

ಕಾರ್ಯಕ್ರಮದ ಅತಿಥಿಗಳಾಗಿದ್ದ ದಾವಣಗೆರೆ ಮಹಾನಗರ ಪಾಲಿಕೆ ಸದಸ್ಯೆ ವೀಣಾ ನಂಜಪ್ಪ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಕಾರ್ಯದರ್ಶಿ ದಿಳ್ಳೆಪ್ಪ ಮಾತನಾಡಿದರು. ಕಾಲೇಜು ಪ್ರಾಂಶುಪಾಲರಾದ ಪ್ರೊ.ಎ.ಎಸ್. ಶೈಲಜಾ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಇದೇ ಸಂದರ್ಭದಲ್ಲಿ ದಾವಣಗೆರೆ ವಿಶ್ವವಿದ್ಯಾಲಯಕ್ಕೆ ಬಿ.ಎ (ಕನ್ನಡ ಐಚ್ಛಿಕ) ವಿಭಾಗದಲ್ಲಿ 8ನೇ ರ್‍ಯಾಂಕ್ ಪಡೆದ ಕಾಲೇಜಿನ ಕಾವ್ಯ ಎಸ್.ಎ. ಅವರನ್ನು ಸನ್ಮಾನಿಸಲಾಯಿತು. ಕಾಲೇಜು ವತಿಯಿಂದ 2,000, ಪ್ರಾಂಶುಪಾಲರಾದ ಪ್ರೊ.ಎ.ಎಸ್. ಶೈಲಜಾ ಮತ್ತು ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಅವರು ವೈಯಕ್ತಿಕವಾಗಿ ತಲಾ 1,000, ಕನ್ನಡ ವಿಭಾಗದ ಮುಖ್ಯಸ್ಥ ಮಂಜಣ್ಣ ಹಾಗೂ ಸಹ ಪ್ರಾಧ್ಯಾಪಕರಾದ ಕಾವ್ಯಶ್ರೀ ಅವರು 2,000 ಹಾಗೂ ಪಾಲಿಕೆ ಸದಸ್ಯೆ ಗೀತಾ ದಿಳ್ಳೆಪ್ಪ ದಂಪತಿ 3,000 ಪ್ರೋತ್ಸಾಹ ಧನವನ್ನು ವಿದ್ಯಾರ್ಥಿನಿ ಕಾವ್ಯ ಅವರಿಗೆ ನೀಡಿದರು.

ಕಾಲೇಜಿನ ಐಕ್ಯುಎಸಿ ಸಂಚಾಲಕರಾದ ಭೀಮಪ್ಪ ಪಿ., ಕಚೇರಿ ಅಧೀಕ್ಷಕ ಶೇಷಪ್ಪ ಟಿ. ಇದ್ದರು. ಉಪನ್ಯಾಸಕರಾದ ಪೂರ್ಣಿಮಾ ಸ್ವಾಗತಿಸಿದರು. ಸಿದ್ದಲಿಂಗಮ್ಮ ಕಾರ್ಯಕ್ರಮ ನಿರೂಪಿಸಿದರು.

## ಮೃತ ಬಾಲಕನ ತಂದೆಗೆ ಚೆಕ್ ವಿತರಣೆ



ದಾವಣಗೆರೆ, ಜೂ. 23- ನಗರ ಪಾಲಿಕೆಯ 21ನೇ ವಾರ್ಡ್ ಬಸಾಪುರ ಗ್ರಾಮದಲ್ಲಿ ಇದೇ ದಿನಾಂಕ 2ರ ರಾತ್ರಿ ಕಾಂಪೌಂಡ್ ಗೇಟ್ ಬಿದ್ದು ನಾಗಾರ್ಜುನ ಎಂಬ ಬಾಲಕ ಮೃತಪಟ್ಟಿದ್ದನು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಅವರು ಮಹಾನಗರ ಪಾಲಿಕೆ ಆಯುಕ್ತರಿಗೆ ಯುವಕನ ಕುಟುಂಬಕ್ಕೆ ಆರ್ಥಿಕ ಸಹಾಯ ಮಾಡಲು ಶಿಫಾರಸು ಮಾಡಿದ್ದರು.

ಪಾಲಿಕೆಯಿಂದ 50 ಸಾವಿರ ಮೊತ್ತದ ಚೆಕ್ಕನ್ನು ಇತ್ತೀಚೆಗೆ ಶಾಸಕ ಶಾಮನೂರು ಶಿವಶಂಕರಪ್ಪನವರು ಮೃತ ಬಾಲಕನ ತಂದೆ ಗುರುಶಾಂತಯ್ಯ ನವರಿಗೆ ನೀಡಿದರು. ಈ ಸಂದರ್ಭದಲ್ಲಿ ಪಾಲಿಕೆ ಆಯುಕ್ತರಾದ ರೇಣುಕಾ, ಮಹಾಪೌರ ವಿನಾಯಕ ಪೈಲ್ವಾನ್, ಪಾಲಿಕೆ ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಶ್ರೀಮತಿ ಶಿವಲೀಲಾ, ಮುಖಂಡರಾದ ಕೆ.ಎಲ್ ಹರೀಶ್ ಬಸಾಪುರ, ಕೊಟ್ರಯ್ಯ, ಹೆಚ್. ಎಸ್ ರಮೇಶ್ ಕುಮಾರ್, ಕುಮಾರಸ್ವಾಮಿ, ನಾಗರಾಜ್ ಉಪಸ್ಥಿತರಿದ್ದರು.

## ಗುರೂಜಿ ಭಕ್ತರಿಂದ ಯೋಗ ದಿನ



ದಾವಣಗೆರೆ, ಜೂ.23- ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ನಗರದ ಶ್ರೀ ಸದ್ಯೋಜಾತ ಸ್ವಾಮೀಜಿ ಮಠದಲ್ಲಿ ಶಿವಕುಮಾರ್ ನೇತೃತ್ವದಲ್ಲಿ ವಿಶ್ವ ಯೋಗ ದಿನಾಚರಣೆ ಆಚರಿಸಲಾಯಿತು. ಗುರೂಜಿ ಭಕ್ತರಾದ ಇಂದೂಧರ್ ನಿಶಾನಿಮಠ್, ದಿನೇಶ್ ಗುತ್ತಲ್ ಸೋಮಶೇಖರ ಕದಂ, ಲಿಂಗರಾಜ ಮತ್ತಿತರರು ಹಾಜರಿದ್ದರು.

# ಎಸ್ಸೆಸ್ ಜನಕಲ್ಯಾಣ ಟ್ರಸ್ಟ್‌ನಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ

ದಾವಣಗೆರೆ, ಜೂ.23- ಡಾ.ಶಾಮನೂರು ಶಿವಶಂಕರಪ್ಪ ಜನಕಲ್ಯಾಣ ಟ್ರಸ್ಟ್ ವತಿಯಿಂದ 2023-24 ನೇ ಸಾಲಿಗೆ ರಾಜ್ಯದ ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಟ್ರಸ್ಟ್ ಕಾರ್ಯದರ್ಶಿ ಡಾ.ಅಥಣಿ ವೀರಣ್ಣ ತಿಳಿಸಿದ್ದಾರೆ.

ಟ್ರಸ್ಟ್‌ನಿಂದ ಕಳೆದ 11 ವರ್ಷಗಳಿಂದ ವಿದ್ಯಾರ್ಥಿ ವೇತನವನ್ನು ನೀಡುತ್ತಿದ್ದು, ಹಿಂದಿನ ವರ್ಷ ಸುಮಾರು 900 ಜನ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿತರಣೆ ಮಾಡಲಾಗಿದೆ.

ಈ ಬಾರಿ ಐ.ಟಿ.ಐ, ಡಿಪ್ಲೋಮಾ, ಪದವಿ ಕಾಲೇಜು, ವೃತ್ತಿ ಶಿಕ್ಷಣ ಕಾಲೇಜು, ಕಾನೂನು ಕಾಲೇಜು, ಮ್ಯಾನೇಜ್‌ಮೆಂಟ್ ಮತ್ತು ಇತರೆ ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ 2023-24 ರ ಶೈಕ್ಷಣಿಕ ಅವಧಿಯಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಆಯಾ ಕಾಲೇಜುಗಳ ವಾರ್ಷಿಕ ಶುಲ್ಕಕ್ಕೆ ಅನುಗುಣವಾಗಿ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು.

ವಿದ್ಯಾರ್ಥಿ ವೇತನವನ್ನು ನಿರೀಕ್ಷಿಸುವ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಭಾನ್ವಿತ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಆಯಾ ಶಾಲಾ – ಕಾಲೇಜುಗಳ ಮುಖ್ಯಸ್ಥರ ಕ್ರಮಬದ್ಧವಾದ ಅರ್ಜಿಗಳ ಮೂಲಕ ಪ್ರಮಾಣ ಪತ್ರಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ನಿಗದಿತ ಅರ್ಜಿಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ಮತ್ತು ಹೆಚ್ಚಿನ ವಿವರಗಳಿಗಾಗಿ ಟ್ರಸ್ಟ್‌ನ ಅಂತರ್ಜಾಲ ತಾಣ http://www.ssjanakalyatrust.org/ ವನ್ನು ಮಾತ್ರ ಸಂಪರ್ಕಿಸಲು ಸೂಚಿಸಲಾಗಿದೆ. ಯಾವುದೇ ಪತ್ರ ವ್ಯವಹಾರ ಅಥವಾ ದೂರವಾಣಿ ಕರೆಗಳಿಗೆ ಉತ್ತರಿಸಲಾಗುವುದಿಲ್ಲ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು 16-07-2023 ಕೊನೆಯ ದಿನವಾಗಿರುತ್ತದೆ ಎಂದು ಅಥಣಿ ವೀರಣ್ಣ ತಿಳಿಸಿದ್ದಾರೆ.

### ಪತ್ರಕರ್ತರ ಮಕ್ಕಳಿಗೆ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ಜೂ.23- ಡಾ.ಶಾಮನೂರು ಶಿವಶಂಕರಪ್ಪ ಜನ ಕಲ್ಯಾಣ ಟ್ರಸ್ಟ್ ವತಿಯಿಂದ ದಾವಣಗೆರೆ ಜಿಲ್ಲೆಯ ಪತ್ರಕರ್ತರು ಮತ್ತು ಮಾಧ್ಯಮ ಛಾಯಾಗ್ರಾಹಕರ ಮಕ್ಕಳಿಗೆ ವಿದ್ಯಾರ್ಥಿ ವೇತನಕ್ಕಾಗಿ 2023-24 ನೇ ಸಾಲಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಟ್ರಸ್ಟ್ ಕಾರ್ಯದರ್ಶಿ ಡಾ.ಅಥಣಿ ವೀರಣ್ಣ ತಿಳಿಸಿದ್ದಾರೆ.

ದಾವಣಗೆರೆ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪತ್ರಕರ್ತರ/ಮಾಧ್ಯಮದವರ ಮತ್ತು ಮಾಧ್ಯಮ ಛಾಯಾಗ್ರಾಹಕರ ಮಕ್ಕಳು 2023-24ನೆ ಶೈಕ್ಷಣಿಕ ಅವಧಿಗೆ ಪ್ರವೇಶ ಪಡೆದ ಯಾವುದೇ ಶಾಲಾ, ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ 2023-24ನೇ ಸಾಲಿನ ವಾರ್ಷಿಕ ಶುಲ್ಕಕ್ಕೆ ಅನುಗುಣವಾಗಿ ಟ್ರಸ್ಟ್ ವತಿಯಿಂದ ವಿದ್ಯಾರ್ಥಿ ವೇತನ ಪಡೆಯಬಹುದಾಗಿದೆ.

ವಿದ್ಯಾರ್ಥಿ ವೇತನವನ್ನು ನಿರೀಕ್ಷಿಸುವ ಪ್ರತಿಭಾನ್ವಿತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಆಯಾ ಶಾಲಾ/ಕಾಲೇಜುಗಳ ಮುಖ್ಯಸ್ಥರ ಮೂಲಕ ಕ್ರಮಬದ್ಧವಾದ ಪ್ರಮಾಣ ಪತ್ರಗಳೊಂದಿಗೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದಾಗಿದೆ.

ನಿಗದಿತ ಅರ್ಜಿಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ಮತ್ತು ಹೆಚ್ಚಿನ ವಿವರಗಳಿಗಾಗಿ ಟ್ರಸ್ಟ್‌ನ ಅಂತರ್ಜಾಲ ತಾಣ http://www.ssjanakalyatrust.org/ ವನ್ನು ಮಾತ್ರ ಸಂಪರ್ಕಿಸಲು ಸೂಚಿಸಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು 16-07-2023 ಕೊನೆಯ ದಿನವಾಗಿದೆ ಎಂದು ಅವರು ತಿಳಿಸಿದ್ದಾರೆ.

## ಕುವೆಂಪು ವಿವಿ ಸಿಂಡಿಕೇಟ್ ಸದಸ್ಯ ಬಾಡ ಶಾಂತಕುಮಾರ್‌ಗೆ ಸನ್ಮಾನ



ದಾವಣಗೆರೆ, ಜೂ. 23- ಕುವೆಂಪು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಶಾಂತಕುಮಾರ್ ಬಾಡ ಅವರನ್ನು ವಿದ್ಯಾನಗರದ ಆರೇಂಜ್ ಕಾರ್ ಕೇರ್ ವತಿಯಿಂದ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಆರೇಂಜ್ ಕಾರ್ ಕೇರ್ ಮಾಲೀಕರಾದ ವೀರೇಶ್ ಬಾಡ, ಗೆಳೆಯರ ಬಳಗದ ಗಿರೀಶ್, ಮಂಜುನಾಥ್, ಮೋಹನ್ ಉಪಸ್ಥಿತರಿದ್ದರು.

## ಅಂತರರಾಷ್ಟ್ರೀಯ ಯೋಗ ಸಾಧಕ ಪ್ರಶಸ್ತಿಗೆ ನಗರದ ತೀರ್ಥರಾಜ್ ಹೋಲೂರ್ ಆಯ್ಕೆ



ದಾವಣಗೆರೆ, ಜೂ.23- ವಿಯಟ್ನಾಂ'ನ ಹೊಚಿಮಿನ್ ನಗರದ 'ವಿ ಯೋಗ ವರ್ಲ್ಡ್' ವತಿಯಿಂದ ಕೊಡಮಾಡುವ ಅತ್ಯುನ್ನತವಾದ ಪ್ರತಿಷ್ಠಿತ ಇಂಟರ್ ನ್ಯಾಷನಲ್ ಯೋಗ ಅಚೀವರ್ ಅವಾರ್ಡ್‌ಗೆ ಅಂತರರಾಷ್ಟ್ರೀಯ ಯೋಗ ರೆಫರಿ ನಗರದ ತೀರ್ಥರಾಜ್ ಹೋಲೂರ್ ಭಾಜನರಾಗಿದ್ದಾರೆ.

ವಿಯಟ್ನಾಂ'ನ ಹೊಚಿಮಿನ್ ನಗರದ 'ಫಸ್ಟ್' ಹೋಟೆಲ್ ಸಭಾಂಗಣದಲ್ಲಿ ವಿಶ್ವ ಯೋಗ ದಿನದ ಅಂಗವಾಗಿ ಮೊನ್ನೆ ಆಯೋಜಿಸಲಾಗಿದ್ದ ಆರ್ಟಿಸ್ಟಿಕ್ ಯೋಗ ಸ್ಪರ್ಧೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಂಸ್ಥೆಯ ಸಿಇಒ ವಿಶ್ವನಾಥ ಕುಲಕರ್ಣಿ ಪ್ರಶಸ್ತಿ ಪ್ರದಾನ ಮಾಡಿದರು. 'ವಿ ಯೋಗ ವರ್ಲ್ಡ್' ಮುಖ್ಯಸ್ಥರಾದ ತಾ ತುಯ್ ದಂಗ್, ರಾಜೇಶ್ ವಿಯಟ್ನಾಂ ದಾಡ್‌ಐ ನೀ, ಚಿ ಆನ್ ಮತ್ತು ಲಿ ಹುಯ್ ಬ್ಯಾಂಗ್ ಮತ್ತಿತರರು ಉಪಸ್ಥಿತರಿದ್ದರು.

## ಹರಿಹರಕ್ಕೆ ಇಂದು ಸಂಸದ ಸಿದ್ದೇಶ್ವರ

ಸಂಸದ ಜಿ.ಎಂ. ಸಿದ್ದೇಶ್ವರ ಅವರು ಇಂದು ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಇಂದು ಬೆಳಿಗ್ಗೆ 11 ಕ್ಕೆ ಕುಂಬಳೂರು ಗ್ರಾಮದ ಬಸವ ಗುರುಕುಲ ವಿದ್ಯಾಸಂಸ್ಥೆಯ ನೂತನ ಶಾಲಾ ಕೊಠಡಿಗಳ ಉದ್ಘಾಟನೆ, ನಂತರ ಮಧ್ಯಾಹ್ನ 3 ಗಂಟೆಗೆ ಗುರುಭವನದಲ್ಲಿ ನಡೆಯುವ ಕೇಂದ್ರ ಪುರಸ್ಕೃತ ಸ್ವಾ-ನಿಧಿ ಯೋಜನೆಯ ಫಲಾಭವಿಗಳ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

## ನಗರದಲ್ಲಿ ಆಧುನಿಕ ಹೈನುಗಾರಿಕೆ ಶಿಬಿರ

ದಾವಣಗೆರೆ, ಜೂ. 23 - ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇದೇ ದಿನಾಂಕ 26, 27 ರಂದು 25 ರೈತರಿಗೆ ಆಧುನಿಕ ಹೈನುಗಾರಿಕೆ ತರಬೇತಿ ಆಯೋಜಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ : 08192-233787.

## ಬೆನಕನಹಳ್ಳಿ ಪ್ರಾಥಮಿಕ ಕೃಷಿ ಸಹಕಾರ ಸಂಘದ ನಿರ್ದೇಶಕರಾಗಿ ಸುರೇಂದ್ರಗೌಡ

ಹೊನ್ನಾಳಿ, ಜೂ.23- ತಾಲ್ಲೂಕಿನ ಬೆನಕನಹಳ್ಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾಗಿ ಡಿ.ಎಸ್. ಸುರೇಂದ್ರಗೌಡ ಆಯ್ಕೆಯಾಗಿದ್ದಾರೆ.

ಬಿ.ಜಿ. ಸಿದ್ದಪ್ಪ ಅವರ ತೆರವಾದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಸುರೇಂದ್ರಗೌಡ ನಿರ್ದೇಶಕರಾಗಿ ಆಯ್ಕೆಗೊಂಡಿದ್ದಾರೆ.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಬೆನಕಪ್ಪ, ಕಾರ್ಯದರ್ಶಿ ಹಾಲೇಶ್, ಕ್ಷೇತ್ರಾಧಿಕಾರಿ ವಿಜಯ್ ಕುಮಾರ್, ನಿರ್ದೇಶಕರಾದ ಶುಂಠಿ ಗಣೇಶಪ್ಪ, ಎ.ಜಿ. ಗಣೇಶ್, ಸೋಮ್ಲಾನಾಯ್ಕ, ಕೆ. ಶೇಖರಪ್ಪ, ರುದ್ರೇಶಪ್ಪ, ಲಲಿತಮ್ಮ ಷಣ್ಮುಖಪ್ಪ, ರಾಜೇಶ್ವರಿ ನವೀನಕುಮಾರ್, ಮಹೇಶ್ವರಪ್ಪ, ಮಂಜಪ್ಪ, ಸಿಬ್ಬಂದಿಗಳಾದ ಗಿರೀಶ್, ಪರಶುರಾಮ್, ಚನ್ನೇಶ್ ಮತ್ತಿತರರಿದ್ದರು.



## ನಗರದಲ್ಲಿ ಇಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಎಲ್ಲಾ ಘಟಕಗಳ ಸಭೆ

ಜಿಲ್ಲಾ ಕಾಂಗ್ರೆಸ್ ಸಮಿತಿಯ ಎಲ್ಲಾ ಘಟಕಗಳ ಜಿಲ್ಲಾಧ್ಯಕ್ಷರ ಸಮ್ಮುಖದಲ್ಲಿ ಇಂದು ಬೆಳಿಗ್ಗೆ 11.30ಕ್ಕೆ ಸಭೆಯನ್ನು ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಕರೆಯಲಾಗಿದೆ. ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರುಗಳಿಗೆ ಸನ್ಮಾನ ಸಮಾರಂಭವನ್ನು ಏರ್ಪಡಿಸುವುದರ ಕುರಿತು ಈ ಸಭೆ ಕರೆಯಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಎಸ್ಸಿ ಘಟಕದ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ ಕೋರಿದ್ದಾರೆ.

# ಹೊಂಡಾ ಶೈನ್ 100 ಸಿಸಿ ಬೈಕ್ ಬಿಡುಗಡೆ



ದಾವಣಗೆರೆ, ಜೂ. 23- ಪ್ರೀತಿ, ನಂಬಿಕೆ, ಭರವಸೆ ಇವೆಲ್ಲದರ ಸಮ್ಮಿಳಿತವೇ ಹೋಂಡಾ ಆಗಿ ಮೂಡಿದೆ ಎಂದು ವಾಣಿ ಹೋಂಡಾ ಮಾಲೀಕ ಎಂ.ಆರ್. ಪ್ರಭುದೇವ್ ಅಭಿಪ್ರಾಯಪಟ್ಟರು.

ನಗರದ ಪಿ.ಬಿ.ರಸ್ತೆಯ ಅರುಣ ಚಿತ್ರಮಂದಿರದ ಎದುರು ಗುರುವಾರ ಹಮ್ಮಿಕೊಂಡಿದ್ದ ಶೈನ್ 100 ಸಿಸಿ ಬೈಕ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿ, ಹೋಂಡಾ 150 ವರ್ಷಗಳ ಇತಿಹಾಸ ಹೊಂದಿದೆ. ಭಾರತದಲ್ಲಿ ಕಳೆದ 25 ವರ್ಷಗಳಿಂದ ಆಕ್ಟೀವಾ ಬ್ರಾಂಡನ್ನು ಜನರು ಈಗಲೂ ಮುಗಿಬಿದ್ದು ಖರೀದಿಸುತ್ತಾರೆ ಎಂದರು.

ಶ್ರೀನಿವಾಸ್ ಹೋಂಡಾ ಮಾಲೀಕ ಆರ್. ಎಸ್. ಪುನೀತ್ ಮಾತನಾಡಿ, ತಂತ್ರಜ್ಞಾನದಲ್ಲಿ ಹೋಂಡಾ ಅತ್ಯುತ್ತಮವಾದುದು. ಗ್ರಾಹಕರಿಗೆ ಅಗತ್ಯ ಇರುವ ಫೀಚರ್ಸ್‌ಗಳನ್ನು ಈ ಬೈಕ್‌ನಲ್ಲಿ ಅಳವಡಿಸಲಾಗಿದೆ. 125 ಸಿಸಿ ಒಂದು ವರ್ಗಕ್ಕೆ ಸೀಮಿತವಾಗಿತ್ತು. ಆದರೆ, ಶೈನ್ 100 ಬೈಕ್ ಎಲ್ಲ ವರ್ಗದ ಜನರಿಗೆ ಕೈಗೆಟಕುವ ದರದಲ್ಲಿದೆ. ಒಳ್ಳೆಯ ಬಜೆಟ್‌ನಲ್ಲಿ ಉತ್ತಮ ಮೈಲೇಜ್ ನೀಡುವ ವಾಹನ ಇದಾಗಿದೆ ಎಂದರು.

ಟ್ರಾಫಿಕ್ ಇನ್ಸ್‌ಪೆಕ್ಟರ್ ಸುನೀಲ್ ಮಾತನಾಡಿ, ಹೋಂಡಾ ಶೈನ್ ಬೈಕ್ ನೋಡುವುದಕ್ಕೆ ಅದ್ಭುತವಾಗಿದ್ದು, ಅತ್ಯಾಕರ್ಷಕವಾಗಿದೆ. ಹೊಸ ಫೀಚರ್‌ಗಳು ಇರುವುದರಿಂದ ಸವಾರರಿಗೆ ಇಷ್ಟವಾಗಲಿದೆ. ಅಪ್ಡೇಟ್ ಆಗಿರುವ ವಾಹನ ಖರೀದಿಗೆ ಸಾರ್ವಜನಿಕರು ಮುಂದಾಗಲಿದ್ದಾರೆ.

10 ವರ್ಷ ವಾರಂಟಿ ಸಾಮಾನ್ಯವಾಗಿ ಬೈಕ್‌ಗಳಿಗೆ ಒಂದೆರೆಡು ವರ್ಷಗಳ ಕಾಲ ವಾರಂಟಿ ನೀಡಲಾಗುತ್ತದೆ. ಆದರೆ, ಶೈನ್ 100 ಬೈಕ್‌ಗೆ 10 ವರ್ಷಗಳ ಕಾಲ ಹೋಂಡಾ ಕಂಪನಿ ವಾರಂಟಿ ನೀಡುತ್ತಿದೆ. ಇದು ಗ್ರಾಹಕರಿಗೆ ಲಾಭ ತರಲಿದೆ ಎಂದು ವಾಣಿ ಹೋಂಡಾ ಮಾಲೀಕ ಎಂ.ಆರ್. ಪಭುದೇವ್ ಹೇಳಿದರು.

ವಲಯ ವ್ಯವಸ್ಥಾಪಕ ಮಂಜುನಾಥ್ ರಾಯ್ಕರ್, ವಾಣಿ ಹಾಗೂ ಇತರರು ಇದ್ದರು.

ಈ ಸಂದರ್ಭದಲ್ಲಿ ಶೈನ್ 100 ಸಿಸಿ ಬೈಕ್‌ನ್ನು ಖರೀದಿಸಿದ ಪ್ರಥಮ ಗ್ರಾಹಕರಾದ ಅಬ್ದುಲ್ ಖಾದರ್, ಹನುಮಂತಪ್ಪ, ಕಿರಣ್ ಹಾಗೂ ಉದಯ್ ಅವರಿಗೆ ಕೀ ಹಸ್ತಾಂತರಿಸಲಾಯಿತು.

## ಇಂದು ಸಾಲುಮರದ ವೀರಾಚಾರಿ ಸ್ಮರಣೋತ್ಸವ

ಪರಿಸರ ಸಂರಕ್ಷಣೆ ವೇದಿಕೆ ಮತ್ತು ಮಿಟ್ಲಕಟ್ಟೆ ಗ್ರಾಮಸ್ಥರ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಹಾಗೂ ಸಾಲುಮರದ ವೀರಾಚಾರಿ ಸ್ಮರಣೋತ್ಸವ ಕಾರ್ಯಕ್ರಮವನ್ನು ಇಂದು 24ರಂದು ಬೆಳಿಗ್ಗೆ 10.15 ಕ್ಕೆ ಹರಿಹರ ತಾಲ್ಲೂಕಿನ ಮಿಟ್ಲಕಟ್ಟೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ದಿ. ಸಾಲುಮರದ ವೀರಾಚಾರಿ ಅವರ ನಿವಾಸಕ್ಕೆ ರಾಜ್ಯ ಸರ್ಕಾರದ ಪರಿಸರ ರಾಯಭಾರಿ, ವೃಕ್ಷ ಮಾತೆ ಸಾಲುಮರದ ತಿಮ್ಮಕ್ಕ, ರಾಷ್ಟ್ರೀಯ ಪರಿಸರ ಪ್ರಶಸ್ತಿ ಪುರಸ್ಕೃತ ಬಳ್ಳೂರು ಉಮೇಶ್ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಲಿದ್ದಾರೆ. ನಂತರ ಮಿಟ್ಲಕಟ್ಟೆ ಗ್ರಾಮದ ಸಸಿ ನೆಡುವ ಮೂಲಕ ಸ್ಮರಣೋತ್ಸವ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮಕ್ಕೆ ಅರಣ್ಯ ಅಧಿಕಾರಿಗಳು, ಗಣ್ಯರು, ಜನಪ್ರತಿನಿಧಿಗಳು ಪರಿಸರ ಪ್ರೇಮಿಗಳು, ಮಿಟ್ಲಕಟ್ಟೆ ಗ್ರಾಮಸ್ಥರು, ಭಾಗವಹಿಸಲಿದ್ದಾರೆ ಎಂದು ವೇದಿಕೆ ಅಧ್ಯಕ್ಷ ಗಿರೀಶ್ ಎಸ್. ದೇವರಮನೆ ತಿಳಿಸಿದ್ದಾರೆ.

## ವಸತಿ ನಿವೇಶನಕ್ಕೆ ಅರ್ಜಿ

ದಾವಣಗೆರೆ, ಜೂ. 23 - ಆಶ್ರಯ ಯೋಜನೆಯಡಿ ವಸತಿ ನಿವೇಶನಗಳನ್ನು ಪಡೆಯಲು ಮಲೇಬೆನ್ನೂರು ಪಟ್ಟಣ ವಾಸಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಮಲೇಬೆನ್ನೂರು ಪುರಸಭೆ ಕಚೇರಿಯಲ್ಲಿ ನಮೂನೆ ಪಡೆದು ಅಗತ್ಯ ದಾಖಲಾತಿಗಳೊಂದಿಗೆ ಜುಲೈ 25 ರೊಳಗಾಗಿ ಸಲ್ಲಿಸಬೇಕು ಎಂದು ಮಲೇಬೆನ್ನೂರು ಪುರಸಭೆ ಆಡಳಿತಾಧಿಕಾರಿಗಳು ತಿಳಿಸಿದ್ದಾರೆ.


**ನಗರದಲ್ಲಿ ಯಶಸ್ವಿ ನಾಟಕ ಪ್ರದರ್ಶನ**

ಶ್ರೀ ಸಂತ ಶರೀಫ ಶಿವಯೋಗಿ ನಾಟ್ಯಸಂಘ (ರಿ.) ತೆಗ್ಗಿಹಳ್ಳಿ ಇವರಿಂದ
ದಾವಣಗೆರೆ ಪಿ.ಬಿ. ರಸ್ತೆ, ಟಿ.ಎಂ. ವಿನಾಯಕ ಪಿಎಂಪಿಎಸ್. ಕಾಂಪೌಂಡಿನಲ್ಲಿ
ಮಧ್ಯಾಹ್ನ 3 ಗಂಟೆಗೆ, ಸಂಜೆ 6.15ಕ್ಕೆ ಪ್ರತಿದಿನ 2 ಪ್ರದರ್ಶನಗಳು



**ಬಳೆಗಾರ ಹನುಮವ್ವ**

ಹೆಣ್ಣುಮಕ್ಕಳು ಅತ್ಯವಶ್ಯಕವಾಗಿ ನೋಡುವಂತಹ ನಾಟಕ
ಈ ನಾಟಕದಲ್ಲಿ ದಾನಮ್ಮ ದೇವಿ ಚಿತ್ರದಲ್ಲಿ ನಟಿಸಿದ ಆಶಾರಾಣಿ ಬಿಜಾಪುರ ಇವರು ಮುಖ್ಯ ಪಾತ್ರದಲ್ಲಿದ್ದಾರೆ.
ಟಿಕೆಟ್ ದರ ಖರ್ಚಿ 100/-
ಮಾಲೀಕರು : ಖತಾಲಸಾಬ ಆರ್. ಬಣಗಾರ
ಸಂಚಾಲಕರು : ಆಶಾರಾಣಿ ಬಿಜಾಪುರ

**ನಮ್ಮಲ್ಲಿ ತಿಪಟೂರ್ ಟಾಲ್ ತಳಿಯ ತೆಂಗಿನ ಹಾಗೂ ನಾಟಿ ತಳಿಯ ಅಡಿಕೆ ಸಸಿಗಳು ದೊರೆಯುತ್ತವೆ**

ನಮ್ಮಲ್ಲಿ ನಮ್ಮದೇ ತೋಟದಲ್ಲಿ ತೆಗೆದ ಬೀಜದಿಂದ ನಾಲ್ಕರಿಂದ ಐದು ವರ್ಷಗಳಲ್ಲಿ ಅಧಿಕ ಇಳುವರಿ ಬರುವ ಈ ಸಸಿಗಳು ಪ್ರತಿಯೊಂದು ವಾತಾವರಣಕ್ಕೂ ಹೊಂದಿಕೊಳ್ಳುತ್ತವೆ. ಹಾಗೂ ಅಧಿಕ ತೂಕದ ಅಡಿಕೆ ಇಳುವರಿ ಬರುತ್ತದೆ. ತಿಪಟೂರ್ ಟಾಲ್ ತೆಂಗಿನ ಸಸಿಗಳು ಸಹ ನಾಲ್ಕೇ ವರ್ಷದಲ್ಲಿ ಅಧಿಕ ಇಳುವರಿ ಬರುವ ಹಾಗೂ ಪ್ರತಿಯೊಂದಕ್ಕೂ (ಎಳನೀರು, ಕಾಯಿ, ಕೊಬ್ಬರಿಗೆ) ಬಳಕೆಯಾಗುತ್ತವೆ. ಬೆಳೆದ ಕಾಯಿಗೆ ಮಾರುಕಟ್ಟೆಯಲ್ಲಿ ಅತಿ ಹೆಚ್ಚಿನ ಬೆಲೆಗೆ ಮಾರಾಟವಾಗುವ ತಿಪಟೂರ್ ಟಾಲ್ ತಳಿಯ ತೆಂಗಿನ ಸಸಿಗಳು ದೊರೆಯುತ್ತವೆ.

**ಈ ಸಸಿಗಳನ್ನು ಯಾವ ಕಾಲದಲ್ಲಿ ಆದರೂ (ಬೇಸಿಗೆಯಲ್ಲಿಯೂ) ಹಾಕಬಹುದು ಹಾಗೂ ಈ ಸಸಿಗಳನ್ನು ಅತೀ ಕಡಿಮೆ ನೀರಿನಲ್ಲಿಯೂ ಬೆಳೆಯಬಹುದು.**





ಕೂಡಲೇ ಸಂಪರ್ಕಿಸಿ.
ವಿಳಾಸ : ಶ್ರೀ ಮಲ್ಲಿಕಾರ್ಜುನ್.ವಿ.ಹೆಚ್.
ಸ್ಥಳ : ತಾಳ್ಯ, ಹೊಳಲ್ಕರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
ಮೊ : 81975 69730, 84318 55583
ಈ ಸಸಿಗಳು ಬೇಕಾದವರಿಗೆ ಡೆಲಿವರಿಯನ್ನು ಸಹಿತ ಕೊಡಲಾಗುವುದು.
ನಿಮಗೆ ನಮ್ಮ ತಳಿಯ ಸಸಿಯ ಬಗ್ಗೆ ಫಲಾನುಭವಿಗಳಿಂದ ಮಾಹಿತಿ ಬೇಕೆಂದರೆ ಮೇಲೆ ಸೂಚಿಸಿರುವ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ.

YOGI RAM
SHASHI EDUCAIONAL TRUST (R)
LALITHA IIT and NEET ACADEMY
(LALITHA PRE UNIVERSITY COLLEGE)
#67/1, LOKIKERE MAIN ROAD, DAVANGERE. KARNATAKA
FOR REGISTRATION CONTACT
7022004042 / 7022004109 / 9980629965
CREATING THE FUTURE DOCTORS ++++. 2024
ONE YEAR
LONG TERM NEET
COACHING PROGRAMME
ADMISSIONS OPEN
NEET LONG TERM BATCH
AND
NEET REPEATERS
ಡಾಕ್ಟರ್ ಆಗುವ ನಿಮ್ಮ ಕನಸಿಗೆ ಸಮರ್ಥ ಆಯ್ಕೆ
Separate Hostel Facility for Boys & Girls
CLASSES COMMENCE FROM JULY- 3RD 2023



# ವಿದ್ಯುತ್ ಬೆಲೆ ಏರಿಕೆ: ಕೆಇಆರ್‌ಸಿಗೆ ಅರ್ಜಿ ಹಾಕಲು ಉದ್ಯಮಿಗಳಿಗೆ ಸೂಚನೆ

ಬೆಂಗಳೂರು, ಜೂ. 23 - ಗೃಹ ಜ್ಯೋತಿ ಯೋಜನೆಗೂ ವಿದ್ಯುತ್ ದರ ಏರಿಕೆಗೂ ಯಾವುದೇ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಕೈಗಾರಿಕೋದ್ಯಮಗಳ ಜೊತೆ ಸಭೆ ನಡೆಸಿದ ಮುಖ್ಯಮಂತ್ರಿ, ಗೃಹಜ್ಯೋತಿ ಹೊರೆಯನ್ನು ಯಾರ ಮೇಲೂ ಹಾಕುವುದಿಲ್ಲ. ಇದೊಂದು ತಪ್ಪು ಅಭಿಪ್ರಾಯ ಎಂದರು.

ನಮ್ಮ ಸರ್ಕಾರ ವಿದ್ಯುತ್ ಶುಲ್ಕವನ್ನು ಏರಿಸುವ ನಿರ್ಧಾರ ಮಾಡಿಲ್ಲ. ಕೆಇಆರ್‌ಸಿಯು ಬೆಲೆ ಹೆಚ್ಚಳದ ನಿರ್ಧಾರವನ್ನು ನಮ್ಮ ಸರ್ಕಾರಅಧಿಕಾರಕ್ಕೆಬರುವಮುನ್ನವೇ ಕೈಗೊಂಡಿತ್ತು ಎಂದರು.

ದರ ಹೆಚ್ಚಳದಿಂದ ಉಂಟಾಗುವ ಸಮಸ್ಯೆಗಳ ಅರಿವು ನನಗಿದೆ. ಇದರ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ, ಪರಿಹಾರ ಕಂಡು ಹಿಡಿಯಲು ಕ್ರಮಕೈಗೊಳ್ಳುವ ಭರವಸೆ ನೀಡಿದ್ದಾರೆ.

ಹಿಂದಿನ ಸರ್ಕಾರ 11 ಸಾವಿರ ಕೋಟಿ ರೂ.ಗಳ ಮೊತ್ತವನ್ನು ವಿದ್ಯುತ್ ಪ್ರಸರಣ ನಿಗಮಗಳಿಗೆ ಬಾಕಿ ಉಳಿಸಿದೆ. ಅವರು ಉಳಿಸಿ ಹೋದ ಹೊರೆಯನ್ನು ನಾವು ಭರಿಸಬೇಕಿದೆ. ಕೆಇಆರ್‌ಸಿಗೆ ಮರುಪರಿಶೀಲನಾ ಅರ್ಜಿ ಹಾಕಿ ದರ ಪರಿಷ್ಕರಣೆಗೆ ನೀವು ಮನವಿ ಮಾಡಿ ಎಂದು ಉದ್ಯಮಿದಾರರಿಗೆ ಇದೇ ಸಂದರ್ಭದಲ್ಲಿ ತಿಳಿಸಿದರು.

# ಅವಿನಾಶ್‌ರಾವ್‌ಗೆ ಚಿನ್ನದ ಪದಕ



ದಾವಣಗೆರೆ, ಜೂ.23- ದೇಶದ ಯು.ಪಿ.ಎಸ್.ಸಿ. ಟಾಪರ್‌ಗಳಲ್ಲೊಬ್ಬರಾದ ಹಾಗೂ ಕರ್ನಾಟಕದ ಪ್ರಥಮ ರ್‍ಯಾಂಕ್ ಪಡೆದಿರುವ ನಗರದ ಅವಿನಾಶ್ ವಿ.ರಾವ್ ಅವರು ಪ್ರಸಕ್ತ ಸಾಲಿನ ರಾಷ್ಟ್ರಮಟ್ಟದ ಐ.ಎಫ್.ಎಸ್. ತರಬೇತಿಯಲ್ಲಿನ ಅತ್ಯುತ್ತಮ ಸಂಶೋಧನೆಗಾಗಿ ಚಿನ್ನದ ಪದಕ ಪಡೆದಿದ್ದಾರೆ.

ನವದೆಹಲಿಯಲ್ಲಿ ಮೊನ್ನೆ ನಡೆದ ಕಾರ್ಯಕ್ರಮದಲ್ಲಿ ಭಾರತದ ವಿದೇಶಾಂಗ ಸಚಿವ ಡಾ. ಎಸ್.ಜಯಶಂಕರ್ ಅವರಿಂದ ಚಿನ್ನದ ಪದಕ ಪಡೆದರು. ಅವಿನಾಶ್, ಹಿರಿಯ ಹೋಟೆಲ್ ಉದ್ಯಮಿ ಕೆ.ವಿ. ಆನಂದ್ ರಾವ್ ಅವರ ಮೊಮ್ಮಗ ಹಾಗೂ ವಿಠಲರಾವ್, ಸ್ಮಿತಾ ರಾವ್ ಅವರ ಸುಪುತ್ರರು. ಅವಿನಾಶ್ ರಾವ್ ಗೆ ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ್ ಅಭಿನಂದನೆ ಹೇಳಿದ್ದಾರೆ.

# ಕೇರಳದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸುಧಾಕರನ್ ಬಂಧನ



ಕೊಚ್ಚಿ, ಜೂ. 23 – ವಂಚನೆ ಪ್ರಕರಣದಲ್ಲಿ ಕೇರಳ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೆ.ಸುಧಾಕರನ್ ಅವರನ್ನು ಬಂಧಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಪ್ರಾಚೀನ ವಸ್ತುಗಳನ್ನು ಮಾರಾಟ ಮಾಡುವ ಮೊನ್ಸನ್ ಮವುಂಕಲ್ ನಡೆಸಿದ ವಂಚನೆಯಲ್ಲಿ ಸುಧಾಕರನ್ ಪಾತ್ರವಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ವಿಚಾರಣೆ ನಡೆಸಲಾಗಿದೆ.

ಸುಧಾಕರನ್ ಉಪಸ್ಥಿತಿಯಲ್ಲಿ ಮವುಂಕಲ್‌ಗೆ ಹಣ ನೀಡಿದ್ದಾಗಿ ವಂಚನೆಗೆ ಗುರಿಯಾದವರು ಹೇಳಿದ್ದರು. ಈ ಹಿನ್ನೆಲೆಯಲ್ಲಿ ಸುಧಾಕರನ್ ಹೇಳಿಕೆ ದಾಖಲಿಸಿಕೊಳ್ಳಲಾಗಿತ್ತು. ಸುಧಾಕರನ್ ತಮ್ಮ ವಿರುದ್ಧದ ಆರೋಪ ತಳ್ಳಿ ಹಾಕಿದ್ದಾರೆ.

# ಪರಿಸರ ಪ್ರೀತಿಯಿಂದ ಆತ್ಮತೃಪ್ತಿ : ಸಾಲುಮರದ ತಿಮ್ಮಕ್ಕ

## ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಪರಿಸರ ದಿನಾಚರಣೆ



ದಾವಣಗೆರೆ, ಜೂ. 23 - ಪ್ರಕೃತಿ ತಾಯಿ ಇದ್ದಂತೆ. ತನ್ನ ಮಕ್ಕಳಿಗೆ ಎಲ್ಲವನ್ನೂ ಕೊಡುತ್ತದೆ. ಏನನ್ನೂ ವಾಪಸ್ ಬಯಸುವುದಿಲ್ಲ. ಅಂತಹ ಪ್ರಕೃತಿ ಮಾತೆಯನ್ನು ಎಲ್ಲರೂ ರಕ್ಷಿಸಬೇಕು. ಮಕ್ಕಳು ತಾಯಿಯನ್ನು ಪೋಷಿಸುವುದನ್ನು ರೂಢಿಸಿಕೊಳ್ಳಬೇಕು ಎಂದು ಪದ್ಮಶ್ರೀ ಪುರಸ್ಕೃತ ಪರಿಸರ ಪ್ರೇಮಿ ಸಾಲುಮರದ ತಿಮ್ಮಕ್ಕ ಅಭಿಪ್ರಾಯಪಟ್ಟರು.

ದಾವಣಗೆರೆ ವಿಶ್ವವಿದ್ಯಾನಿಲಯ ಪರಿಸರ ವಿಜ್ಞಾನ ಅಧ್ಯಯನ ವಿಭಾಗ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಸಹಭಾಗಿತ್ವದಲ್ಲಿ ಏರ್ಪಡಿಸಿದ್ದ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪರಿಸರಕ್ಕಾಗಿ ಪ್ರೀತಿಯಿಂದ ಮಾಡುವ ಯಾವುದೇ ಕೆಲಸವೂ ಆತ್ಮತೃಪ್ತಿ ನೀಡುತ್ತದೆ. ಲಾಭ-ನಷ್ಟದ ಲೆಕ್ಕ ಬಿಟ್ಟು ನಿಸ್ವಾರ್ಥದಿಂದ ಸೇವೆ ಸಲ್ಲಿಸಿದಾಗ ಪ್ರಕೃತಿ ನೀಡುವ ಅದ್ಭುತ ಕೊಡುಗೆಗೆ ಮಿತಿ ಇರುವುದಿಲ್ಲ ಎಂದರು.

ಗಿಡಗಳನ್ನು ನಾನು ಮಕ್ಕಳಂತೆ ಬೆಳೆಸಿದೆ. ಅದರಲ್ಲೇ ನಾನು ಪ್ರೀತಿ ಬೆಳೆಸಿಕೊಂಡೆ. ಕಣ್ಣೆದುರೇ ಬೆಳೆದ ಗಿಡಗಳೆಲ್ಲ ನೀಡಿದ ತಂಪಿನಲ್ಲಿ ನಾನೂ ಬೆಳೆದೆ. ನಾನು ಪ್ರೀತಿಯಿಂದ ಬೆಳೆಸಿದ ಗಿಡಗಳೇ ನನ್ನನ್ನು ಈ ಮಟ್ಟಕ್ಕೆ ತಂದಿವೆ. ಪ್ರೀತಿಯಿಂದ ಯಾವುದೇ ಕೆಲಸ ಮಾಡಿದರೂ ಅದು ಸಂತೃಪ್ತಿ ಹಾಗೂ ಯಶಸ್ಸು ನೀಡುತ್ತದೆ ಎಂದು ತಿಮ್ಮಕ್ಕ ಹೇಳಿದರು.

ತಿಮ್ಮಕ್ಕ ಅವರ ಪುತ್ರ ಉಮೇಶ್ ಬಳ್ಳೂರು ಮಾತನಾಡಿ, ಪರಿಸರ ನಾಶದಿಂದ ಜಗತ್ತು ಅಪಾಯಕಾರಿ ಸ್ಥಿತಿ ತಲುಪುತ್ತಿದೆ. ಶುದ್ಧ ಗಾಳಿ, ಬೆಳಕು, ನೀರು ಇಲ್ಲದೆ ಜನರು ಹತ್ತಾರು ರೋಗಗಳಿಗೆ ಬಲಿಯಾಗುತ್ತಿದ್ದಾರೆ. ಈ ಎಲ್ಲ ಸಮಸ್ಯೆಗಳಿಗೆ ಪರಿಸರ ರಕ್ಷಣೆ ಮತ್ತು ಪ್ರಕೃತಿ ಸಂಬಂಧಿ ನೆಲೆಯೊಂದೇ ಪರಿಹಾರ ಮಾರ್ಗ ಎಂದು ಹೇಳಿದರು.

ಕಾಡಿಗೆ ಹೋಗಿ ಪ್ರಾಣಿಗಳನ್ನು ನೋಡಲು ಆಸಕ್ತಿ ತೋರುವ ಜನರು, ಅದೇ ಪ್ರಾಣಿಗಳು ನಾಡಿಗೆ ಬಂದರೆ ಸಹಿಸುವುದಿಲ್ಲ. ಇಂಥ ವೈಪರಿತ್ಯವನ್ನು ಹೋಗಲಾಡಿಸಲು ಪರಿಸರದೊಂದಿಗೆ ಬದುಕುವ ವಾತಾವರಣ ನಿರ್ಮಿಸಬೇಕಿದೆ ಎಂದರು.

ಕುಲಸಚಿವೆ ಸರೋಜ ಬಿ.ಬಿ. ಮಾತನಾಡಿ, ಪರಿಸರ ರಕ್ಷಣೆಯ ಜಾಗೃತಿ ಮೂಡಿಸಲು 112ನೇ ವಯಸ್ಸಿನಲ್ಲಿಯೂ ದಣಿವರಿಯದಂತೆ ಕಾಳಜಿ ವಹಿಸುತ್ತಿರುವ ಮತ್ತು ಜನರಿಗೆ ಪ್ರೇರಣೆ ನೀಡುತ್ತಿರುವ ತಿಮ್ಮಕ್ಕ ಅವರ ಸೇವೆ ಸದಾ ಸ್ಮರಣೀಯ ಎಂದು ಹೇಳಿದರು.

ಪರೀಕ್ಷಾಂಗ ಕುಲಸಚಿವ ಡಾ. ಕೆ. ಶಿವಶಂಕರ್ ಮಾತನಾಡಿದರು. ಪರಿಸರ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಪ್ರೊ. ಗೋವಿಂದಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಶಾರದಾ ದೇವಿ ಕಳ್ಳಿಮನಿ ಸ್ವಾಗತಿಸಿದರು. ಎನ್‌ಎಸ್‌ಎಸ್ ಅಧಿಕಾರಿ ಡಾ.ಅಶೋಕ ಕುಮಾರ ಪಾಳೇದ, ಪ್ರೊ. ಶಿಶುಪಾಲ, ಪ್ರೊ.ಜೆ.ಕೆ.ರಾಜು ಉಪಸ್ಥಿತರಿದ್ದರು.

# ಮುರುಘಾಮಠದಲ್ಲಿ ನಾಳೆ ಭಕ್ತರ ಸಭೆ

ಚಿತ್ರದುರ್ಗ, ಜೂ. 23- ಇಲ್ಲಿನ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಮತ್ತು ಉಚ್ಚನ್ಯಾಯಾಲಯ ಆದೇಶಿಸಿದ್ದು, ನ್ಯಾಯಾ ಲಯದ ಆದೇಶದಂತೆ ಇದೇ ದಿನಾಂಕ 25 ರಂದು ಭಾನುವಾರ ಬೆಳಿಗ್ಗೆ 11.30 ಕ್ಕೆ ಶ್ರೀ ಮುರುಘಾ ಮಠದ ರಾಜಾಂಗಣದಲ್ಲಿ ನಾಡಿನ ಭಕ್ತರ ಮಹಾಸಭೆ ಕರೆಯಲಾಗಿದೆ ಎಂದು ಭಕ್ತರ ಪರವಾಗಿ ಪಿ. ಎಸ್. ಪ್ರಕಾಶ ಮತ್ತು ಹಿರಿಯ ಪತ್ರ ಕರ್ತ ದೊಣೆಹಳ್ಳಿ ಗುರುಮೂರ್ತಿ ತಿಳಿಸಿದ್ದಾರೆ.

ಶ್ರೀ ಮುರುಘರಾಜೇಂದ್ರ ಬೃಹನ್ಮಠ ಮತ್ತು ಎಸ್‌ಜೆಎಂ ವಿದ್ಯಾಪೀಠಕ್ಕೆ ಸೂಕ್ತ ಆಡಳಿತ ವ್ಯವಸ್ಥೆಗಾಗಿ ನೀಡಿರುವ ನ್ಯಾಯಾಲಯದ ಆದೇಶದಂತೆ ಶ್ರೀಮಠದ ನಾಡಿನ ಭಕ್ತರ ಮಹಾಸಭೆ ಕರೆಯಲಾಗಿದೆ.

ಚಿತ್ರದುರ್ಗ ಸೇರಿದಂತೆ ರಾಜ್ಯಾದ್ಯಂತ ಇರುವ ಭಕ್ತಾದಿಗಳು, ಮಠಾಧೀಶರ ಒಡನಾಡಿಗಳು, ಬಸವಕೇಂದ್ರದ ಮುಖಂಡರು, ಕಾರ್ಯಕರ್ತರು ಹಾಗೂ ಶ್ರೀ ಮುರುಘಾ ಪರಂಪರೆಯ ಆಂಧ್ರ, ತಮಿಳು ನಾಡು, ಮಹಾರಾಷ್ಟ್ರ, ಕೇರಳದ ಸ್ವಾಮೀಜಿ ಗಳು, ಮುಖಂಡರು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

# ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಕೇಳಿದ ಸೋಮಣ್ಣ



ಬೆಂಗಳೂರು, ಜೂ. 24 - ನನಗೆ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಕೊಡಿ ಎಂದು ಪಕ್ಷದ ಹೈಕಮಾಂಡ್‌ಗೆ ಮನವಿ ಮಾಡಿದ್ದೇನೆ ಎಂದು ಮಾಜಿ ಸಚಿವ ವಿ. ಸೋಮಣ್ಣ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಸೋಮಣ್ಣ, ಕಳೆದ ಚುನಾವಣೆಯಲ್ಲಿ ನಾನು ಸೋತಿರಬಹುದು. ಆದರೆ, ಕೊಟ್ಟ ಹೊಣೆಗಾರಿಕೆಯಲ್ಲಿ ಸೋತಿಲ್ಲ ಎಂದಿದ್ದಾರೆ. ನಮ್ಮ ಪಕ್ಷದ ರಾಷ್ಟ್ರೀಯ ನಾಯಕರಿಗೆ ಪತ್ರ ಬರೆದು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಸ್ಥಾನ ಕೇಳಿದ್ದು ನಿಜ. ನನಗೆ 100 ದಿನ ಅವಕಾಶ ನೀಡಿದರೆ ಸಾಕು. ಒಬ್ಬ ರಾಜ್ಯಾಧ್ಯಕ್ಷ ಹೇಗೆ ಕೆಲಸ ಮಾಡಬೇಕು ಎಂಬುದನ್ನು ತೋರಿಸುವೆ ಎಂದು ಸೋಮಣ್ಣ ಹೇಳಿದ್ದಾರೆ.

ಕಳೆದ 15 ವರ್ಷಗಳಿಂದ ನಾನು ಬಿಜೆಪಿಯಲ್ಲಿ ದುಡಿದಿದ್ದೇನೆ. ಪಕ್ಷವನ್ನು ತುಂಬಾ ಹತ್ತಿರದಿಂದ ಬಲ್ಲವನಾಗಿದ್ದೇನೆ. ನನಗೆ ನನ್ನದೇ ಆದಂತಹ 45 ವರ್ಷದ ಅನುಭವವಿದೆ. ಬಿಜೆಪಿ ಕೊಟ್ಟ ಅನೇಕ ಹೊಣೆಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದೇನೆ. ಕೆಟ್ಟ ಪರಿಸ್ಥಿತಿಯಲ್ಲಿ ಒಂದು ಅವಕಾಶ ಕೊಡಿ ಎಂದು ಕೇಳಿದ್ದೇನೆ. ಎಲ್ಲರನ್ನೂ ಒಗ್ಗಟ್ಟಾಗಿಸಲು ಅವಕಾಶ ಕೇಳಿದ್ದೇನೆ ಎಂದವರು ಹೇಳಿದ್ದಾರೆ.

# ಕೇಂದ್ರದಿಂದ ಅಕ್ಕಿ, ಗೋಧಿ ಹರಾಜು ಬೆಲೆ ನಿಯಂತ್ರಣಕ್ಕಾಗಿ ಕ್ರಮ

ನವದೆಹಲಿ, ಜೂ. 23 – ಬೆಲೆ ನಿಯಂತ್ರಿಸುವ ಸಲುವಾಗಿ 4 ಲಕ್ಷ ಟನ್ ಗೋಧಿ ಹಾಗೂ 5 ಲಕ್ಷ ಟನ್ ಅಕ್ಕಿಯನ್ನು ತನ್ನ ನಿರ್ವಹಣಾ ದಾಸ್ತಾನಿನಿಂದ ಹರಾಜು ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಜೂನ್ 28ರಂದು ಕೇಂದ್ರ ಆಹಾರ ನಿಗಮ ಹರಾಜಿನ ಮೂಲಕ ಗೋಧಿಯನ್ನು ವಿತರಣೆ ಮಾಡಲಿದೆ. ಜುಲೈ 5ರಂದು ಅಕ್ಕಿ ಹರಾಜು ನಡೆಯಲಿದೆ. ಇದಕ್ಕಾಗಿ ಶೀಘ್ರದಲ್ಲೇ ಟೆಂಡರ್ ಕರೆಯಲಾಗುವುದು.

## ವಿದೇಶ ಪ್ರವಾಸ ಶುಭ ಹಾರೈಕೆ



ಶ್ರೀಮತಿ ಚಂದ್ರಮ್ಮ ಕೆ. ಕೊಟಗಿ
ಶ್ರೀ ಕೊಟ್ರಪ್ಪ ಹೆಚ್. ಕೊಟಗಿ
ಅಧ್ಯಕ್ಷರು, ಎಐಟಿಯುಸಿ, ಹರಿಹರ ತಾಲ್ಲೂಕು

ಇವರು ಕೆಲಸದಲ್ಲಿರುವ ತಮ್ಮ ಮಗ-ಸೊಸೆ ಹಾಗೂ ಮೊಮ್ಮಕ್ಕಳನ್ನು ನೋಡಲು ದಿನಾಂಕ : 26.6.2023ರಂದು ಬೆಂಗಳೂರು ಮೂಲಕ ಅಮೇರಿಕಾದ ಮಿಚಿಗನ್ ರಾಜ್ಯದ ಟ್ರಾಯ್ ನಗರಕ್ಕೆ ಪ್ರಯಾಣ ಬೆಳೆಸಲಿದ್ದಾರೆ. ಇವರ ವಿದೇಶ ಪ್ರವಾಸವು ಸುಖಕರವಾಗಿರಲಿ ಹಾಗೂ ಕ್ಷೇಮವಾಗಿರಲೆಂದು ಶುಭ ಹಾರೈಸುತ್ತೇವೆ.

ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘ ಹಾಗೂ ಎಐಟಿಯುಸಿ, ದಾವಣಗೆರೆ ಜಿಲ್ಲಾ ಸಮಿತಿ, ದಾವಣಗೆರೆ.

## ಬನ್ನಿಕೋಡು ಹೇಮಚಂದ್ರಪ್ಪ ಬಿ.ಜಿ. ನಿಧನ



ಹರಿಹರ ತಾಲ್ಲೂಕು, ಬನ್ನಿಕೋಡು ಗ್ರಾಮದ ನಿವಾಸಿ

**ಬಿ.ಜಿ. ಹೇಮಚಂದ್ರಪ್ಪ**

ಇವರು ದಿನಾಂಕ 23.6.2023ರ ಶುಕ್ರವಾರ ಮಧ್ಯಾಹ್ನ 12.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 80 ವರ್ಷ ವಯಸ್ಸಾಗಿತ್ತು. ಐವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 24.6.2023ರ ಶನಿವಾರ ಬೆಳಿಗ್ಗೆ 12 ಗಂಟೆಗೆ ಸ್ವಗ್ರಾಮವಾದ ಹರಿಹರ ತಾಲ್ಲೂಕು ಬನ್ನಿಕೋಡು ಗ್ರಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : ಶ್ರೀಮತಿ ಗಂಗಮ್ಮ, ವೀರಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಗೌಡ್ರು ವಂಶಸ್ಥರು, ಬನ್ನಿಕೋಡು.

## ದ್ವಿತೀಯ ಪುಣ್ಯಸ್ಮರಣೆ




ದಿ. ಟಿ. ಹುಚ್ಚಪ್ಪನವರು (ಮರಣ : 24.06.2021)

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು. ಸದಾ ನಿಮ್ಮ ನೆನಪು, ಮಾರ್ಗದರ್ಶನದಲ್ಲಿ ನಡೆಯುತ್ತಿರುವ

ಧರ್ಮಪತ್ನಿ : ಶ್ರೀಮತಿ ಸಿದ್ದಮ್ಮ ಮತ್ತು ಮಕ್ಕಳು ಶಿವಕುಮಾರ್, ಹನುಮಂತಪ್ಪ, ಫಕ್ಕೀರಪ್ಪ, ಬಸವರಾಜ್ (ಅಳಿಯಂದಿರು), ಸಹೋದರರಾದ ಆನಂದಪ್ಪ, ರಾಮಪ್ಪ, ಅಕ್ಕಂದಿರಾದ ರತ್ನಮ್ಮ, ಬುಳ್ಳಮ್ಮ, ಶಿವಮ್ಮ, ಕೆಂಚಮ್ಮ ಹಾಗೂ ಬಂಧು-ಮಿತ್ರರು. 90194 71919, 96631 21914

॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಜನನ : 20.1.1940

ನಿಧನ : 17.06.2023

ದಾವಣಗೆರೆ ಸಿಟಿ ಶಂಕರ್‌ವಿಹಾರ್ ಬಡಾವಣೆ ವಾಸಿ
ಶ್ರೀಮತಿ ವಿಶಾಲಕ್ಷಮ್ಮ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿ.: 17.06.2023ನೇ ಶನಿವಾರ ಬೆಳಿಗ್ಗೆ: 10.45 ಕ್ಕೆ
ನನ್ನ ಪೂಜ್ಯ ಪತಿಯವರಾದ

**ಶ್ರೀ ಹೆಚ್.ಎಂ. ವಿಶ್ವನಾಥಯ್ಯ** (ವಕೀಲರು)

ಇವರು, ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 25.06.2023ನೇ ಭಾನುವಾರ ಬೆಳಿಗ್ಗೆ 11.00 ಕ್ಕೆ ದಾವಣಗೆರೆ ಸಿಟಿ ಶಂಕರ್‌ವಿಹಾರ್ ಬಡಾವಣೆ ಚರ್ಚ್ ರಸ್ತೆ, 1ನೇ ಅಡ್ಡ ರಸ್ತೆಯಲ್ಲಿರುವ ನಮ್ಮ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ವಿಶಾಲಕ್ಷಮ್ಮ ಮತ್ತು ಮಕ್ಕಳು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.
ಮೊ : 98865 21348, 94489 17562

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ತಪ್ಪದೇ ಆಗಮಿಸಲು ಕೋರಿದೆ.




19 COUNTRIES | NOW IN 200+ CITIES IN INDIA | 35+ MILLION CUSTOMERS AND COUNTING
ಮ್ಯಾಕ್ಸ್ | ಬಾಪೂಜಿ ಡೆಂಟಲ್ ಕಾಲೇಜು ಎದುರು
maxfashion.com